# SB ARTS AND KCP SCIENCE COLLEGE VIJAYAPUR

( RANI CHENNAMMA UNIVERSITY BELAGAVI )

A

PROJECT REPORT

ON

# "A STUDY ON EVALUVATION OF M.G.N.R.E.G.S IN KUSNOOR VILLAGE"


**SUBMITTED BY :**

**MR. ABHISHEK. CHAVADIHAL**

**( S.W 6Th sem )**

**( Reg. No. U15KM21A0048 )**

**Guide**

**Sri. Bharati Karakall**

**(M.S.W Lecturer)**

**SB ARTS AND KCP SCIENCE COLLEGE, VIJAYAPUR**

**Principal**

**SB ARTS AND KCP SCIENCE COLLEGE, VIJAYAPUR**


**2023-2024**

# SB ARTS AND KCP SCIENCE COLLEGE VIJAYAPUR

( RANI CHENNAMMA UNIVERSITY BELAGAVI )

## CERTIFICATE

This is to certify that Mr. Abhishek Chavadihal ( Reg.no U15KM21A0048 ), Has submitted project Entitled " **A STUDY ON EVALUATION OF M.G.N.R.E.G.S IN KUSNOOR VILLAGE** " partial fullfillment of the requirement of social work 6th semester of the year 2023-2024.

| | |
|---|---|
| **Guide** | **Principal** |
| **Sri. Bharati Karakall** | **Dr. R.N.Mirde** |
| **(M.S.W Lecturer)** | **( Ph.D )** |
| **SB ARTS AND KCP SCIENCE COLLEGE, VIJAYAPUR** | **SB ARTS AND KCP SCIENCE COLLEGE, VIJAYAPUR** |

**DEDICATED TO...**

**MY BELOVED PARENTS,**

**LECTURERS AND FRIENDS.**



**MR. ABHISHEK CHVADIHAL**

## ಘೋಷಣಾ ಪತ್ರ

ಈ ಮೂಲಕ ನಾನು ಧೃಡಿಕರಿಸುವದನೆಂದರೆ **"ಕುಸುನೂರ ಗ್ರಾಮದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಮೌಲ್ಯಮಾಪನ ಕುರಿತು ಒಂದು ಅಧ್ಯಾಯನ"** ಎಂಬ ಶಿರ್ಷಿಕೆಯ ಮೇಲೆ ಈ ನನ್ನ ಯೋಜನಾ ವರದಿಯನ್ನು 2023-24ನೇ ಸಾಲಿನ

SB arts and k.c.p science College ಸಮಾಜ ಕಾರ್ಯ ವಿಭಾಗ 6ನೇ ಸೇಮಿಸ್ಟರ ಪದವಿಗಾಗಿ ನಮ್ಮ ಕಾಲೇಜಿನ ಉಪನ್ಯಾಸಕರಾದ **ಶ್ರೀಮತಿ ಭಾರತೀ ಕಾರ್ಕಳ** ಅವರ ಮಾರ್ಗದರ್ಶನದಲ್ಲಿ ಈ ಯೋಜನಾವರದಿಯನ್ನು ರಚಿಸಲಾಗಿದೆ.

ಇದು ನನ್ನ ಸ್ವಂತ ಅಭ್ಯಾಸ ಹಾಗೂ ಪರಿಶ್ರಮದ ಫಲವಾಗಿದೆ. ಎಂದು ಇಲ್ಲಿಯವರಿಗೆ ಯಾವುದೇ ವಿಶ್ವವಿದ್ಯಾಲಯದಲ್ಲಿ ಈ ಯೋಜನಾವರದಿಯ ಮೇಲೆ ಯಾವುದೇ ಪದವಿ ಕೋರ್ಸಿಗಾಗಿ ವರದಿಯನ್ನು ಸಲ್ಲಿಸಿರುವದಿಲ್ಲ. ಎಂದು ಪ್ರಮಾಣಿಸುತ್ತೇನೆ.

**ಅಭಿಷೇಕ ಚವಡಿಹಾಳ**

ಸಮಾಜ ಕಾರ್ಯ ವಿಭಾಗ 6ನೇ ಸೆಮಿಸ್ಟರ್

SB arts and k.c.p science College

vijayapura

## ಮುನ್ನುಡಿ

SB arts and k.c.p science College vijayapura ವಿಶ್ವವಿದ್ಯಾಲಯ ವಿಜಯಪುರದಿಂದ ಮಾನ್ಯತೆ ಪಡೆದಿದೆ. 6ನೇ ಸೆಮಿಸ್ಟರ್ ಕಡ್ಡಾಯವಾಗಿ ಯೋಜನಾವರದಿ ತಯಾರಿಸಬೇಕಾಗಿರುತ್ತದೆ. ಈ ಯೋಜನಾವರದಿಯು ತುಂಬಾ ಮುಖ್ಯಾವಾಗಿರುತ್ತದೆ. ಏಕೆಂದರೆ ಇಲ್ಲಿ ವಿಷಯದ ಬಗ್ಗೆ ಸಂಶೋಧನೆ ಮಾಡಿ ಅದರ ಫಲಿತಾಂಶಗಳನ್ನು ಪಟ್ಟಿಮಾಡಿ ಅಧ್ಯಾಯನದ ವರದಿಯನ್ನು ಬರೆಯಬೇಕಾಗುತ್ತದೆ.

6ನೇ ಸೆಮಿಸ್ಟರನಲ್ಲಿ ಈ ಯೋಜನಾ ವರದಿಯನ್ನು ಮಾಡುವದರಿಂದ ಸೈದಾಂತಿಕವಾಗಿ ಕಲಿತಿರುವ ವಿಷಯದ ಬಗ್ಗೆ ವರದಿಯನ್ನು ತಯಾರಿಸಲು ಸಹಾಯವಾಗುತ್ತದೆ ಮತ್ತು ಸಮಾಜಕಾರ್ಯ ಸಂಶೋಧನ ವಿಧಾನವು ತುಂಬಾ ಉಪಯುಕ್ತವಾಗಿದೆ. ಇಲ್ಲಿ ನಾನು ಅನೇಕ ವಿಷಯಗಳ ಸಹಾಯದಿಂದ ನನ್ನ ಸಂಶೋಧನಾ ವಿಷಯದ ಮೇಲೆ ಯೋಜನಾ ವರದಿಯನ್ನು ರಚನೆ ಮಾಡಿದ್ದೇನೆ.

ವರದಿಯನ್ನು ಗುಲಬರ್ಗಾ ಜಿಲ್ಲೆಯ ತಾಲೂಕಿನ ಕುಸುನೂರ ಗ್ರಾಮದ ಪ್ರದೇಶವನ್ನು ಆಯ್ದುಕೊಂಡು "ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ" ಎಂಬುವದರ ವರದಿಯನ್ನು ಕುಸುನೂರ ಗ್ರಾಮದ ಕುರಿತು ಸಂದರ್ಶನ ಮತ್ತು ಪ್ರಶ್ನಾವಳಿ ಮೂಲಕ ಸಮಿಕ್ಷೆ ಮಾಡಿದ್ದೇನೆ.

ಈ ಯೋಜನೆ ಅಡಿಯಲ್ಲಿ ಬರುವಂತಹ ಬಿಡುಗಡೆಯಾದ ಹಣವನ್ನು ಉತ್ತಮ ರೀತಿಯಲ್ಲಿ ಜನರಿಗೆ ತಲುಪಬೇಕು ಮತ್ತು ಜನರ ಕಲ್ಯಾಣವನ್ನು ಬಯಸಬೇಕು. ಎಂಬುವದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಯೋಜನಾ ವರದಿ

## ಕೃತಜ್ಞತೆಗಳು

SB arts and k.c.p science College vijayapura 6ನೇ ಸಮಿಸ್ಟರ ಪಠ್ಯಕ್ರಮಕ, ಅನುಸಾರವಾಗಿ ಯೋಜನಾ ವರದಿಯನ್ನು ಮಡಲಾಗುತ್ತಿದೆ ನನ್ನ ಅಧ್ಯಾಯನಕ್ಕಾಗಿ **ಕುಸುನೂರ ಗ್ರಾಮದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯ ಮೌಲ್ಯಮಾಪನ ಕುರಿತು ಒಂದು ಅಧ್ಯಾಯನ** ಇದರ ಬಗ್ಗೆ ವರದಿಯನ್ನು ತಯಾರಿಸಲು ಅನುಮತಿ ನೀಡಿದ ಮಹಾವಿದ್ಯಾಲಯದ ಪ್ರಾಂಶುಪಾಲರಾದ **Dr. ಆರ್. ಎನ್. ಮೀರದೆ** ಇವರಿಗೆ ನನ್ನ ಹೃದಯ ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ವರದಿಯನ್ನು ತಯಾರಿಸಲು ನನ್ನಗೆ ಮಾರ್ಗದರ್ಶನ ನೀಡಿದಂತಹ **ಶ್ರೀಮತಿ ಭಾರತೀ ಕಾರ್ಕಳ ಮೇಡಂ** ಇವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ರೀತಿಯಾಗಿ ಕಾಲೇಜಿನ ಉಪನ್ಯಾಸಕರಾದ **ಶ್ರೀಮತಿ ಭಾರತೀ ಕಾರ್ಕಳ** ಮತ್ತು **ಶ್ರೀ ಎಸ್.ಬಿ. ರಾಯಣ್ಣನವರ** ಸರಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಯೋಜನಾ ವರದಿ

ಅದೇ ರೀತಿಯಾಗಿ ನನನ್ನು ಹರಸಿ ಹಾರೈಸುತ್ತಿರುವ ನನ್ನ ಪ್ರೀತಿಯ ತಂದೆ-ತಾಯಿಗಳಾದ

**ಶ್ರೀ ಜಗದೀಶ್. ಅ . ಚವಡಿಹಾಳ** ಹಾಗೂ **ಶ್ರೀಮತಿ ಸುಮಂಗಲ. ಜ .ಚವಡಿಹಾಳ** ರವರಿಗೆ

ನಾನು

ಕೃತಜ್ಞತೆಗಳು ಸಲ್ಲಿಸುತ್ತೇನೆ.

ಹಾಗೂ ನನ್ನ **ಅಕ್ಕಂದಿರು** ಮತ್ತು **ಅಣ್ಣಂದಿರಿಗೆ** ನನ್ನ ಹೃದಯ ಪೂರ್ವಕ ಕೃತಜ್ಞತೆಗಳನ್ನು

ಸಲ್ಲಿಸುತ್ತೇನೆ.

ಮತ್ತು ಕಾಲೇಜಿನ ಎಲ್ಲಾ **ಗೆಳೆಯರ ಬಳಗಗೆ** ಮತ್ತು ಇನ್ನಿತರ **ಗೆಳೆಯರಿಗೆ** ಹೃದಯ ಪೂರ್ವಕ

ಕೃತಜ್ಞತೆಗಳು ಸಲ್ಲಿಸುತ್ತೇನೆ.

**ಅಭಿಷೇಕ ಚವಡಿಹಾಳ**

ಸಮಾಜ ಕಾರ್ಯ ವಿಭಾಗದ 6ನೇ ಸೆಮಿಸ್ಟರ್

SB arts and k.c.p science College

vijayapura

## ಪರಿವಿಡಿ


- ❖ **ಘೋಷಣಾ ಪತ್ರ**
- ❖ **ಮನ್ನುಡಿ**
- ❖ **ಕೃತಜ್ಞತೆಗಳು**

**ಅಧ್ಯಾಯ-1**

- ❖ ಪ್ರಸ್ತಾವನೆ
- ❖ ಯೋಜನಾ ವರದಿಯ ಅರ್ಥ
- ❖ ಯೋಜನಾ ವರದಿಯ ಪಠ್ಯಕ್ರಮ

**ಅಧ್ಯಾಯ-2**

- ❖ ಸಮಸ್ಯೆಯ ಹೇಳಿಕೆ
- ❖ ಅಧ್ಯಾಯನಯದ ಮಹತ್ವ
- ❖ ಅಧ್ಯಾಯನದ ಗುರಿ ಉದ್ದೇಶಗಳು

**ಅಧ್ಯಾಯ-3**

- ❖ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗಖಾತರಿ
- ❖ ಯೋಜನೆಯ ಪರಿಚಯ
- ❖ ಉದ್ದೇಶಗಳು
- ❖ ಹಕ್ಕುಗಳು ಮತ್ತು ಅಧಿಕಾರಿಗಳು
- ❖ ನೋಂದಣಿ ಮತ್ತು ಉದ್ಯೋಗ ಚೀಟಿ + ಕೆಲಸಕ್ಕಾಗಿ ಅರ್ಜಿ ಮತ್ತು ಉದ್ಯೋಗ ನೀಡುವಿಕೆ
- ❖ ಕಾಮಗಾರಿಗಳ ಗುಚ್ಛ

* ಉದ್ಯೋಗ ಮಿತ್ರ

**ಅಧ್ಯಾಯ-4**

* ಪ್ರಾಕಲ್ಪನೆ
* ನಮೂನೆಯ ಆಯ್ಕೆ
* ಮಾಹಿತಿ ಸಂಗ್ರಹಣೆಯ ವಿಧಾನಗಳು
* ಅಧ್ಯಾಯನದ ವ್ಯಾಪ್ತಿ

**ಅಧ್ಯಾಯ-5**

* ಕೊಷ್ಟಕಗಳ ರಚನೆ

**ಅಧ್ಯಾಯ-6**

* ಫಲಿತಾಂಶ
* ಸಲಹೆಗಳು
* ಮೌಲ್ಯಮಾಪನ
* ಉಪಸಂಹಾರ

**ಅನುಬಂಧ**

* ಪ್ರಶ್ನಾವಳಿ
* ಆಧಾರ ಗಂಥಗಳು

## ಅಧ್ಯಾಯ - 1

**ಪ್ರಸ್ತಾವನೆ:** ಯಾವುದೇ ಒಂದು ವಿಷಯದ ಅಧ್ಯಯನದಲ್ಲಿ ಪ್ರಸ್ತಾವನೆಯ ಅತ್ಯಂತ ಪ್ರಮುಖವಾದ ಪಾತ್ರ ವಹಿಸುತ್ತದೆ. ಇಲ್ಲಿ ಸಮಾಜ ಕಾರ್ಯ ಸಂಶೋಧನೆಯ ಪ್ರಮುಖವಾಗಿದೆ ಸಾಮಾಜಿಕ ಪ್ರಕ್ರಿಯೆಯಲ್ಲಿ ಒಂದು ಸಾಮಾಜಿಕ ವಿಷಯದ ವೈಜ್ಞಾನಿಕ ಅಧ್ಯಯನದ ಅದು ಸಂಶೋಧನೆ ಸಂಶೋಧನೆಂದರೆ ಸಾಧ್ಯ "**ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ**"ಕೇಂದ್ರ ಮತ್ತು ರಾಜ್ಯ ಸರ್ಕಾರದ ಒಂದು ವಿನೂತನ ಯೋಜನೆಯಾಗಿದ್ದು ಗ್ರಾಮೀಣ ಅಭಿವೃದ್ಧಿಯಲ್ಲಿ ಆಳವಾದ ಮತ್ತು ಸಮಗ್ರ ಸಮಗ್ರ ದೂರದೃಷ್ಟಿಯನ್ನು ಹೊಂದುವ ಮೂಲಕ ಬಲಿಷ್ಠ ಗ್ರಾಮ ಸಮುದಾಯಗಳನ್ನು ಅಭಿವೃದ್ಧಿ ಪಡಿಸುವ ಸಮವಾಗಿದೆ ಈ ಒಂದು ಯೋಜನೆಯನ್ನು ಗ್ರಾಮ ಸಮುದಾಯಗಳ ಸಹಭಾಗಿತ್ವ ಒಟ್ಟುಗೂಡಿದ ಪ್ರಯತ್ನಗಳೊಂದಿಗೆ ಪ್ರತಿ ವರ್ಷ ಕನಿಷ್ಠ ದಿನಗಳ ವರೆಗೆ ಪ್ರತಿ ಗ್ರಾಮೀಣ ಕುಟುಂಬ ಉದ್ಯೋಗ ಮಾಡಲು ಇಚ್ಛಿಸಿದ ವಯಸ್ಕ ಸದಸ್ಯರಿಗೆ ಉದ್ಯೋಗ ಒದಗಿಸುವುದು.

"ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಕೇಂದ್ರ ಮತ್ತು ರಾಜ್ಯ ಸರಕಾರದ ಒಂದು ವಿನೂತನ ಯೋಜನೆಯಾಗಿದ್ದು ಗ್ರಾಮೀಣಾಭಿವೃದ್ಧಿಯಲ್ಲಿ ಆಳವಾದ ಮತ್ತು ಸಮಗ್ರ ದೃಷ್ಟಿ ತವನ್ನು ಹೊಂದುವ ಮೂಲಕ ಬಲಿಷ್ಠ ಗ್ರಾಮ ಸಮುದಾಯಗಳನ್ನು ಅಭಿವೃದ್ಧಿ ಪಡಿಸುವುದಾಗಿದೆ ಈ ಒಂದು ಯೋಜನೆಯನ್ನು ಗ್ರಾಮ ಸಮುದಾಯಗಳ ಸಹಭಾಗಿತ್ವದ ಒಟ್ಟುಗೂಡಿದ ಪ್ರಯತ್ನಗಳೊಂದಿಗೆ ಪ್ರತಿಲ ಗ್ರಾಮೀಣ ಕುಟುಂಬದ ಉದ್ಯೋಗ ಒದಗಿಸುವುದು.

ಗ್ರಾಮೀಣ ಪ್ರದೇಶದಲ್ಲಿ ಸ್ಥಿರಾಸ್ತಿಗಳನ್ನು ರೂಪಿಸುವುದು ಗ್ರಾಮೀಣ ಬಡವರ ಜೀವನೋಪಾಯಕ್ಕೆ ಸಂಪನ್ಮೂಲವಾದ ಆಧಾರವನ್ನು ಬಲಪಡಿಸುವುದು. ಅನುಷ್ಠಾನ ಸಂಸ್ಥೆಗಳಲ್ಲಿ ಮರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಾದ ಗ್ರಾಮ ತಾಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಅದೇ ರೀತಿಯಲ್ಲಿ ಜಿಲ್ಲಾ ಅಧೀನಕ್ಕೆ ವಾರದ ನೆಲಕೆಯಿಂದ ಅರಣ್ಯ ನೀರಾವರಿ ಲೋಕೋಪಯೋಗಿ ಮತ್ತು ಇತರ ಇಲಾಖೆಗಳ ಕಾರ್ಯನಿರ್ವಹಿಸುತ್ತದೆ.

**ಯೋಜನಾ ವರದಿಯ ಅರ್ಥ**

"ಯೋಜನೆ ಎಂದರೆ ಒಂದು ನಿರ್ದಿಷ್ಟವಾದ ಉದ್ದೇಶಗಳನ್ನು ಇಟ್ಟುಕೊಂಡು ಅಧಿವೇಶನಕ್ಕೆ ಅನುಗುಣವಾಗಿ ವ್ಯವಸ್ಥಿತವಾದ ರೀತಿಯಲ್ಲಿ ಹಂತ ಹಂತವಾಗಿ ಉಳಿಯದ ಬಗ್ಗೆ ಆಳವಾದ ಅಧ್ಯಯನ ಮಾಡಿ ಇದಕ್ಕೇನು ಅನುಸಾರವಾಗಿ ವರದಿಯನ್ನು ತಯಾರಿಸುವುದಕ್ಕೆ ಯೋಜನಾ ವರದಿ ಎಂದು ಕರೆಯುತ್ತಾರೆ.

ಯಾವುದೇ ಒಂದು ಯೋಜನೆಯು ಪೂರ್ಣಗೊಳ್ಳಬೇಕಾದರೆ ಹಾಕಿಕೊಂಡ ಯೋಜನೆಯ ನಿರ್ದಿಷ್ಟ ಸಮಯದೊಳಗೆ ಒಂದು ಚೌಕಟ್ಟಿನಲ್ಲಿ ಪೂರ್ಣಗೊಳಿಸಬೇಕು

**ಯೋಜನಾ ವರದಿಯ ಪಠ್ಯಕ್ರಮ:** 1. ಸಿದ್ಧಾಂತಿಕ ವಿಷಯಗಳನ್ನು ಪ್ರಯೋಗಿಕವಾಗಿ ಅಳವಡಿಸಿ ಅಧ್ಯಯನ ಮಾಡುವುದು.

2. ಸಂಶೋಧನೆಯಲ್ಲಿ ತೊಡಗಿದ್ದಾಗ ತರಗತಿಯಲ್ಲಿ ಕಲಿತ ಸಿದ್ಧಾಂತಿಕ ವಿಷಯವನ್ನು ಕ್ಷೇತ್ರಕಾರ್ಯದಲ್ಲಿ ಪ್ರಾಯೋಗಿಕತೆಗೆ ಒಳಪಡಿಸಿದಾಗ ಉಂಟಾಗುವ ಅನುಭವ ಅಭ್ಯಾಸದ ಕುರಿತು.

3. ವೈಜ್ಞಾನಿಕ ವಿಧಾನವನ್ನು ಒಳಪಡಿಸುವುದು.

4. ವೈಜ್ಞಾನಿಕ ಅಧ್ಯಯನಕ್ಕೆ ಮಹತ್ವ ನೀಡುವುದು ವ್ಯಕ್ತಿಗಳ ನಡುವಿನ ಹೋಲಿಕೆ ಸ್ವಭಾವ ತಿಳಿದು ಅದರ ಸಮಸ್ಯೆ ಪರಿಹರಿಸಲು ಸೂಕ್ತ ರೀತಿಯ ಪ್ರಕ್ರಿಯೆಗೆ ಒಳಪಡಿಸಿ ಉತ್ತಮ ಪರಿಹಾರ ನೀಡುವುದು.

5. ಸರಳ ಸಂಶೋಧನೆಯ ಬಗ್ಗೆ ಯೋಜನಾ ಕಾರ್ಯ ಅಧ್ಯಯನದ ಬಗ್ಗೆ ತಿಳಿಸುವುದು.

6. ಸಂಶೋಧನೆಯು ಬಗ್ಗೆ ತಿಳಿಸುವುದು ಮತ್ತು ಅಧ್ಯಯನದ ಬಗ್ಗೆ ಕುರಿತು ತಿಳಿದುಕೊಳ್ಳುವಿಕೆಯ ಬಗ್ಗೆ ಸಾರಾಂಶ ತಿಳಿಯುವುದು.

7. ಸಂಶೋಧನೆ ಅರ್ಥ ಮತ್ತು ವ್ಯಾಪ್ತಿ ಮತ್ತು ಸಮಾಜ ಕಲ್ಯಾಣ ಕಾರ್ಯ ಸಂಶೋಧನೆಯ ಬಗ್ಗೆ ತಿಳಿಸುವುದು.

8. ಸಂಶೋಧನಾ ಆಯ್ಕೆ ಶುದ್ಧ ಪಡಿಸುವವರಿಗಿಂತ ಅಂಶ ತಿಳಿಸುವುದು ಮಾಹಿತಿ ಸಂಗ್ರಹಣೆ ಬಗ್ಗೆ ತಿಳಿಸುತ್ತದೆ.

9. ಮಾಹಿತಿ ಸಂಗ್ರಹಣೆ ಬಗ್ಗೆ ತಿಳಿಸುವುದು.

10.ಲೇಖನಗಳು, ನಕ್ಷೆಗಳು, ಭೂಪಟಗಳು, ಕೋಷ್ಟಕಗಳ ಬಗ್ಗೆ ಜ್ಞಾನವನ್ನು ದೃಷ್ಟಿಸಿ ಕೊಳ್ಳುವುದು

# ಅಧ್ಯಾಯ -2

**ಅಧ್ಯಯನದ ಹೇಳಿಕೆ :**

ಕುಸುನೂರು ಗ್ರಾಮದಲ್ಲಿ ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಮೌಲ್ಯಮಾಪನ ಕುರಿತು ಅಧ್ಯಯನ

ಗ್ರಾಮೀಣ ಪ್ರದೇಶ ಎಂದು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದರೆ ಎಂದು ಹೇಳಬಹುದು ಮುಖ್ಯವಾಗಿ ನಿರುದ್ಯೋಗ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಸರಕಾರವು ಇಂದು ಹಲವಾರು ಯೋಜನೆಗಳ ಹಾಕಿಕೊಂಡು ಅವರ ಸಮಸ್ಯೆಗೆ ಪರಿಹಾರ ನೀಡುವ ಪ್ರಯತ್ನವನ್ನು ಮಾಡುತ್ತಲೇ ಇದೆ ಹಲವಾರು ಯೋಜನೆಗಳಲ್ಲಿ "ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ" ಖಾತರಿ ಯೋಜನೆಯ ಕುಡಾ ಒಂದಾಗಿದೆ ಎಂದು ಹೇಳಬಹುದು. ಇದು ಭಾರತದಲ್ಲಿ 07.09.2005 ರಂದು ಭಾರತದ 200 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಯಿತು. ಮತ್ತು ಕರ್ನಾಟಕದಲ್ಲಿ ಮೊದಲ ಹಂತದಲ್ಲಿ ರಾಜ್ಯ ಗುಲ್ಬರ್ಗ, ಬೀದರ್ ರಾಯಚೂರ್ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ 2006-7 ಸಾಲಿನಿಂದಲೇ ಯೋಜನೆಯನ್ನು ಅನುಷ್ಠಾನ ಗೊಳಿಸಲಾಯಿತು

ಇಲ್ಲಿಂದ ಇಲ್ಲಿಯವರೆಗೆ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಎಂಬುದರ ಬಗ್ಗೆ ಮೌಲ್ಯಮಾಪನ ಮಾಡುವುದು ಈ ಒಂದು ಅಧ್ಯಯನದ ಹೇಳಿಕೆಯಾಗಿದೆ. **ಅಧ್ಯಯನದ ಮಹತ್ವ** : ರಾಜ್ಯ ಎಲ್ಲಾ ಕಡೆ ಹಲವಾರು ಯೋಜನೆಗಳು ಪ್ರತಿ ವರ್ಷಕ್ಕೆ ಬಿಡುಗಡೆ ಅಥವಾ ಜಾರಿಗೆ ಬರುತ್ತದೆ

ಇವೆಲ್ಲವುಗಳನ್ನು ನಮ್ಮ ಗ್ರಾಮೀಣ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲಿಕ್ಕೆ ಮಾತ್ರ ಈಗಾಗಲೇ ಅವರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು ಅವುಗಳ ಪರಿಹರಿಸುವುದು ನಮ್ಮ ರಾಜ್ಯದ ಮುಖ್ಯ ಕಾರ್ಯವಾಗಿದೆ.

ಈ ಒಂದು ಯೋಜನೆಯು ಗ್ರಾಮೀಣ ಪಂಚಾಯಿತಿಯಿಂದ ಗ್ರಾಮದಲ್ಲಿ ತಮ್ಮ ಸ್ವ ಇಚ್ಛೆಯಿಂದ ಅರ್ಜಿಯನ್ನು ಹಾಕುತ್ತಾರೆ ಅವರಿಗೆ ಒಂದು ಆರ್ಥಿಕ ವರ್ಷದಲ್ಲಿ 100 ದಿನಗಳ ಕೆಲಸವನ್ನು ಕೂಡಿಸಿ ಅವರಿಗೆ ಇರುವಂತಹ ನಿರುದ್ಯೋಗ ಸಮಸ್ಯೆಗಳನ್ನು ಹೋಗಲಾಡಿಸುವುದು ಇದರ ಮಹತ್ವವಾಗಿದೆ.

**ಅಧ್ಯಯನದ ಗುರಿ- ಉದ್ದೇಶಗಳು:**

- ಸ್ವ-ಇಚ್ಛೆಯಿಂದ ಅರ್ಜಿ ಸಲ್ಲಿಸುವ ಅನುಕೂಲ ದೈಹಿಕ ಕೆಲಸ ಬಯಸುವ ಗ್ರಾಮೀಣ ಪ್ರದೇಶದ ವಯಸ್ಕರ ಸದಸ್ಯರ ಪ್ರತಿ ಕುಟುಂಬಕ್ಕೆ ಒಂದು. ಆರ್ಥಿಕ ವರ್ಷದಲ್ಲಿ ಕನಿಷ್ಠ ನೂರು ಮಾನವ ದಿನಗಳ ಉದ್ಯೋಗವನ್ನು ಒದಗಿಸಿ ಆ ಮೂಲಕ ಅವರ ಜೀವನಕ್ಕೆ ಭದ್ರತೆ ಒದಗಿಸುವುದು.
- ದೀರ್ಘ ಕಾಲ ಬಾಳಿಕೆ ಬರುವ ಆಸ್ತಿಗಳನ್ನು ಸೃಜಿಸುವುದು ಮತ್ತು ಗ್ರಾಮೀಣ ಬಡವರ ಜೀವನೋಪಾಯದಿಂದ ಗ್ರಾಮಗಳನ್ನು ಬಲಪಡಿಸುವುದು.
- ಮಹಿಳೆಯರಿಗೆ ಮತ್ತು ಪುರುಷರಿಗೆ ಸಮಾನ ಕೂಲಿ (ವೇತನ) ಪಾವತಿಸುವ ಉದ್ದೇಶ.
- ಯೋಜನೆಯನ್ನು ಒಳ್ಳೆಯ ದೃಷ್ಟಿಯಿಂದ ಕಾರ್ಯಗತಗೊಳಿಸುವ ಉದ್ದೇಶ.

- ಕೆಲಸ ಕೋರುವವರ ಪೈಕಿ ಕನಿಷ್ಠ 3ನೇ ಒಂದು ಭಾಗ ಮಹಿಳೆಯರಿಗೆ ಆದ್ಯತೆ ಮೇರೆಗೆ ಉದ್ಯೋಗ ಒದಗಿಸಬೇಕು.
- ವಿಕಲಚೇತನ ವ್ಯಕ್ತಿಗಳಿಗೆ ಯೋಜನೆಯಡಿಯ ಸೂಕ್ತ ಇರುವ ಕೂಲಿ ಕೆಲಸವನ್ನು ನೀಡಬೇಕು.
- ಈ ಯೋಜನೆ ಅಡಿಯ ಗ್ರಾಮೀಣ ಪ್ರದೇಶದ ಜನರನ್ನು ಅಭಿವೃದ್ಧಿ ಮಾಡುವ ಉದ್ದೇಶವನ್ನು ಹೊಂದಿದೆ

## ಅಧ್ಯಾಯ -3

**ಪೀಠಿಕೆ-** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಪರಿಚಯ.

ಸ್ವತಂತ್ರದ ನಂತರ ದೇಶದಲ್ಲಿ ಇದುವರೆಗೆ ಜಾರಿಗೆಗೊಂಡ ಗ್ರಾಮೀಣ ಉದ್ಯೋಗ ಬರವಸೆ ಕಾರ್ಯಕ್ರಮಗಳ ಸಾಧಕ- ಬಾದಕಗಳನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ರೂಪಿಸಿದೆ."ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ-2005" ಅನ್ನು ದಿನಾಂಕ 07.09.2005 ರಂದು ಭಾರತ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ ಪ್ರಾರಂಭದಲ್ಲಿ ನಡೆದ ಎರಡು ನೂರು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಿ. ಮುಂದಿನ ಐದು ವರ್ಷಗಳ ಅವಧಿಯಲ್ಲಿ ದೇಶದ ಎಲ್ಲಾ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸುವ ಉದ್ದೇಶ. ಒಂದಾಗಿದ್ದು ಪ್ರಸ್ತುತ ಈ ಯೋಜನೆ ನಮ್ಮ ದೇಶದ ಎಲ್ಲ ಜಿಲ್ಲೆಗಳಲ್ಲಿ ಅನುಷ್ಠಾನಕ್ಕೆ ಬಂದಿದೆ.

- ಕರ್ನಾಟಕದಲ್ಲಿ ಮೊದಲ ಹಂತದಲ್ಲಿ ರಾಜ್ಯದ ಐದು ಜಿಲ್ಲೆಗಳನ್ನು ಡಾ|| ಡಿ. ಎಂ.ನಂಜುಂಡಪ್ಪ ವರದಿಯ. ಸೂಚ್ಯಂಕಗಳ ಆಧಾರದಂತೆ ಆಯ್ಕೆ ಮಾಡಲಾಗಿ ಇದೆ.
- ರಾಜ್ಯದ ಬೀದರ್, ಗುಲ್ಬರ್ಗ, ರಾಯಚೂರ್, ದಾವಣಗೆರೆ, ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ 2006-07 ಸಾಲಿನಿಂದಲೇ ಯೋಜನೆ ಅನುಷ್ಠಾನಗೊಂಡಿದೆ.

2ನೇ ಅಕ್ಟೋಬರ್ 2009 ಗಾಂಧಿ ಜಯಂತಿ ಎಂದು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ -2005 ಶೀರ್ಷಿಶಿಯ್ ಹಿಂಬದಿಗೆ **"ಮಹಾತ್ಮ ಗಾಂಧಿ"** ಪದ

ಜೋಡಣೆ ಮಾಡಲಾಯಿತು ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಗ್ರಾಮೀಣ ಖಾತರಿ ಅದಿನಿಯಮ -2005 ಎಂದು ನಾಮಕರಣ ಮಾಡಲಾಯಿತು.

**ಉದ್ದೇಶಗಳು:**

1. ಸ್ವ-ಇಚ್ಛೆಯಿಂದ ಅರ್ಜಿ ಸಲ್ಲಿಸುವ, ಅಕುಶಲ ದೈಹಿಕ ಕೆಲಸ ಬಯಸುವ ಗ್ರಾಮೀಣ ಪ್ರದೇಶದ ವಯಸ್ಕ ಸದಸ್ಯರ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ 100 ಮಾನವ ದಿನಗಳ ಉದ್ಯೋಗವನ್ನು ಒದಗಿಸಿ ಆ ಮೂಲಕ ಅವರ ಜೀವನಕ್ಕೆ ಭದ್ರತೆ ಒದಗಿಸುವುದು.

2. ದೀರ್ಘಕಾಲ ಬಾಳಕೆ ಬರುವ ಆಸ್ತಿಗಳನ್ನು ಸೃಜಿಸುವದು ಮತ್ತು ಗ್ರಾಮೀಣ ಬಡವರ ಜೀವನೋಪಾಯದ ಮಾರ್ಗಗಳನ್ನು ಬಲಪಡಿಸುವುದು.

3. ವಾರದಲ್ಲಿಗಳಿಸಿದ ಕೂಲಿಯನ್ನು ಗರಿಷ್ಠ 15 ದಿನದೊಳಗಾಗಿ ಬ್ಯಾಂಕ್ ಅಥವಾ ಕಛೇರಿ ಉಳಿತಾಯ ಖಾತೆ ಮೂಲಕವೇ ಪಾವತಿಸಬೇಕು.

4. ಮಹಿಳೆಯರಿಗೆ ಮತ್ತು ಪುರುಷರಿಗೆ ಸಮಾನ ಕೂಲಿ ಪಾವತಿಸುವುದು.

5. ಯೋಜನೆಯಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳನ್ನು ಗ್ರಾಮ ಸಭೆಯಲಿಯೇ ಗುರುತಿಸುವುದು.

6. ಗುತ್ತಿಗೆದಾರನ್ನು ಸಂಪುರ್ಣ ನಿಷೇಧಿಸಿದೆ.

**ಹಕ್ಕುಗಳು ಮತ್ತು ಅಧಿಕಾರಿಗಳು:**

1. ಕುಟುಂಬ ಉದ್ಯೋಗ ಚೀಟಿಯಲ್ಲಿ ಹೆಸರಿಸುವ, ಕುಟುಂಬ ಎಲ್ಲಾ ವಯಸ್ಕರು, ಅಕಾಶಲ ದೈಹಿಕ ಕೆಲಸಕ್ಕಾಗಿ ಅರ್ಜಿ ಸಲ್ಲಿಸಲು ಹಕ್ಕುಳ್ಳವರಾಗಿರುತ್ತಾರೆ.

2. ಒಂದು ಆರ್ಥಿಕ ವರ್ಷದಲ್ಲಿ ಒಂದು ಕುಟುಂಬವು 100 ಮಾನವ ದಿನಗಳ ಅಕುಶಲ ಕೆಲಸ ಕೋರಿ ಅರ್ಜಿ ಸಲ್ಲಿಸಲು ಹಕ್ಕುಳ್ಳುವರಾಗಿರುತ್ತಾರೆ.

3. ಕೆಲಸ ಕೋರುವರ ಪೈಕಿ ಕನಿಷ್ಠ ಮೂರನೇ ಒಂದು ಭಾಗ ಮಹಿಳೆಯಿರಿಗೆ ಆದ್ಯತೆ ಮೇರೆಗೆ ಉದ್ಯೋಗ ಒದಗಿಸಬೇಕು.

4. 15 ದಿನಗಳೊಳಗಾಗಿ ಕೂಲಿಯನ್ನು ಪಾವತಿಸದಿದ್ದಲ್ಲಿ ಅವರು ಕೂಲಿ ಪಾವತಿ ಅಧಿನಿಯಮ 1936 ಅನ್ವಯ ಕೂಲಿ ಹಕ್ಕುಳಿವರಾಗಿರುತ್ತಾರೆ. ಪರಿಹಾರ ಪಡೆಯುವ ವಿಳಂಬ

5. ಸಮಾನ ವೇತನ ಅಧಿನಿಯಮ 1976 ಅನ್ವಯ ಪುರುಷರು ಮತ್ತು ಮಹಿಳೆಯರು ಸಮಾನ ವೇತನ ಪಡೆಯಿವ ಹಕ್ಕು.

6. ಕಾಮಗಾರಿಯ ಸ್ಥಳದಲ್ಲಿ ಕೆಲಸಗಾರರಿಗೆ ಹಾಗೂ ಮಕ್ಕಳಿಗೆ ವಿಶ್ರಾಂತಿ ಪಡೆಯಲು ನೆರಳಿನ ಮತ್ತು ಶುದ್ಧವಾದ ನೀರಿನ ವ್ಯವಸ್ಥೆ ಇರಬೇಕು.

7. ಕಾಮಗಾರಿಯ ಸ್ಥಳದಲ್ಲಿ ಕೆಲಸ ಮಾಡುವಾಗ ಕೆಲಸಗಾರರಿಗೆ ಗಾಯಗಳಾದಲ್ಲಿ ಉಚಿತ ವೈದ್ಯಕೀಯ ಚಿಕಿತ್ಸೆ ನೀಡಬೇಕು.

ಯೋಜನಾ ವರದಿ

**ನೋಂದಾಣಿ ಮತ್ತು ಉದ್ಯೋಗ ಚೀಟಿ:**

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ಮಾಡಲು ಗ್ರಾಮ ಪಂಚಾಯತಿಯಲ್ಲಿ ನೊಂದಾಯಿಸಿಕೊಳ್ಳಬೇಕಾಗಿರುತ್ತದೆ. ನೊಂದಾಣಿ ವಿಧಾನ ಈ ಕೆಳಕಂಡಂತಿರುತ್ತದೆ.

8. ಕುಟುಂಬದ ವಯಸ್ಕ ಸದಸ್ಯರ ಪೈಕಿ ಯಾರಾದರೊಬ್ಬರ ತಾವು ವಾಸವಿರುವ ಗ್ರಾಮ ಪಂಚಾಯಿತಿಗೆ ನಮೂನೆ-10ರಲ್ಲಿ (ಎರಡು ಪ್ರತಿಗಳಲ್ಲಿ ಅರ್ಜಿ ಸಲ್ಲಿಸಬೇಕು ಈ ಅರ್ಜಿಯ ಗ್ರಾಮ ಪಂಚಾಯತಿಯಲ್ಲಿ ಉಚಿತವಾಗಿ ಲಭ್ಯವಾಗಿರುತ್ತದೆ.

9. ಗ್ರಾಮ ಪಂಚಾಯಿತಿಗೆ ಸಲ್ಲಿಸುವ ಅರ್ಜಿಯಲ್ಲಿ ಕುಟುಂಬದ ವಯಸ್ಕ ಸದಸ್ಯರ ಹೆಸರು, ವಯಸ್ಸು, ವಿಳಾಸ ಇತ್ಯಾದಿ ವಿವರಗಳು ಇರುಬೇಕು.

10. ಉದ್ಯೋಗಕ್ಕಾಗಿ ಮಾಡಿದ ನೋಂದಾಣಿಕೆಯು 5 ವರ್ಷದವರಗೆ ಚಾಲ್ತಿಯಲ್ಲಿರುತ್ತದೆ.

11. ಗ್ರಾಮ ಪಂಚಾಯತಿಗೆ ಅವಶ್ಯವೆನಿಸಿದಲ್ಲಿ 5 ವರ್ಷದ ನಂತರ ಉದ್ಯೋಗ ಚೀಟಿಯನ್ನು ನವೀಕರಿಸಬವುದು.

ಯೋಜನಾ ವರದಿ

**ಉದ್ಯೋಗ ಚೀಟಿ:**

1. ನೊಂದಾಯಿತ ಪ್ರತಿ ಕುಟುಂಬಕ್ಕೆ ನೋಂದಾಣಿ ಅರ್ಜಿ ಸಲ್ಲಿಸಿದ 30 ದಿನಗಳ ಒಳಗಾಗಿ ಏಕ ಮಾತ್ರ ಸಂಖ್ಯೆ ಇರುವ ಕುಟುಂಬದ ಉದ್ಯೋಗ ಚೀಟಿಯನ್ನು (ನಮೂನೆ-4ರಲ್ಲಿ) ಗ್ರಾಮ ಪಂಚಾಯತಿ ಕಾರ್ಯದರ್ಶಿ / ಪಂಚಾಯತಿ ಅಭಿವೃದ್ಧಿ ಅಧಿಕಾರಿ ವಿತರಿಸಬೇಕು.

2. ಕುಟುಂಬದ ಉದ್ಯೋಗ ಚೀಟಿಯನ್ನು ಮೊದಲ ಬಾರಿಗೆ ಕೂಲಿ ಮಾಡಲು ಇಚ್ಛಿಸುವ ಕುಟುಂಬದ ಸದಸ್ಯರ ಭಾವಚಿತ್ರ ಮತ್ತು ಬ್ಯಾಂಕ್ ಖಾತೆಯ ಸಂಖ್ಯೆಯನ್ನು ನಮೂದಿಸಿ 15 ದಿನಗಳಿಗೆ ಮೊದಲ ಬಾರಿಗೆ ಉಚಿತವಾಗಿ ನೀಡಬೇಕು.

3. ಯಾವುದೇ ಕಾರಣಕ್ಕೂ ಉದ್ಯೋಗ ಚೀಟಿಯನ್ನು ಬೇರೆಯವರಿಗೆ ವರ್ಗಾಯಿಸುವಂತಿಲ್ಲ.

4. ಉದ್ಯೋಗ ಚೀಟಿಯನ್ನು ಮತದಾನ ಸಮಯದಲ್ಲಿ ಗುರುತಿನ ಚೀಟಿಯಾಗಿ ಉಪಯೋಗಿಸಬಹುದು.

5. ಉದ್ಯೋಗಾಕಾಂಕ್ಷಿಯ ತಪ್ಪು ಮಾಹಿತಿ ನೀಡಿ ನೋಂದಾಯಿಸಿಕೊಂಡಿದ್ದಲ್ಲಿ ಗ್ರಾಮ ಪಂಚಾಯತಿಯು ಅವರ ಹೇಳಿಕೆಗೆ ಅವಕಾಶ ನೀಡಿ ನಂತರ ಉದ್ಯೋಗ ಚೀಟಿಯನ್ನು ವಜಾಗೊಳಿಸಬೇಕು.

6. ಕಾರ್ಯಕ್ರಮ ಅಧಿಕಾರಿಯು (ಕಾರ್ಯ ನಿರ್ವಾಹಕ ಅಧಿಕಾರಿಯು) ಅಥವಾ ಗ್ರಾಮ ಪಂಚಾಯಿತಿಯು ನಿಗದಿಪಡಿಸಿದ ಯಾವುದೇ ಕೆಲಸವನ್ನು ಉದ್ಯೋಗಕಾಂಕ್ಷಿಯು ತಿರಸ್ಕರಿಸುವಂತಿಲ್ಲ.

- ಕೆಲಸಕ್ಕಾಗಿ ಅರ್ಜಿಯನ್ನು (ನಮೂನೆ-6ರಲ್ಲಿ) ಗ್ರಾಮ ಪಂಚಾಯತಿ ಕಾರ್ಯದರ್ಶಿ / ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಸಲ್ಲಿಸಿ ಅರ್ಜಿದಾರರು ಸ್ವೀಕೃತಿ ಪಡೆಯಬೇಕು.

- ಕಾಮಗಾರಿಗಳಿಗೆ ನಿಯೋಜಿಸಲಾದ ಕೆಲಸಗಾರರ ವಿವರಗಳನ್ನು (ನಮೂನೆರಲ್ಲಿ) ಸಾರ್ವಜನಿಕ ತಿಳುವಳಿಕೆಗಾಗಿ ಪ್ರಚಾರ ಪಡಿಸಬೇಕು.

- ವಿಕಲಚೇತನ (ಅಂಗವಿಕಲ) ವ್ಯಕ್ತಿಗಳಿಗೆ ಯೋಜನೆಯಡಿ ಸೂಕ್ತವಿರುವ ಕೂಲಿ ಕೆಲಸವನ್ನು ವಹಿಸಬೇಕು.

**ಕೂಲಿ ಪಾವತಿ:-**

- ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನಿರ್ವಹಿಸಿದ ಕೂಲಿಕಾರರಿಗೆ ಕೂಲಿಕಾರರಿಗೆ ಕೂಲಿ ಪಾವತಿ ವಿಧಾನ ಈ ಕೆಳಕಂಡಂತಿವೆ.

- ಯೋಜನೆಯಡಿ ನಿಗದಿತ ದಿನಗೂಲಿ ರೂ. 125/- ಆಗಿದೆ. (ಒಂದು ನೂರಾ ಇಪ್ಪತ್ತೈದು ರೂಪಾಯಿಗಳು ಮಾತ್ರ)
- ಕಾಮಗಾರಿ ಸ್ಥಳವು ಕೆಲಸಗಾರರ ವಾಸ ಸ್ಥಳದಿಂದ 5. ಕಿ.ಮೀ.ಗಿಂತ ದೂರವಿದ್ದಲ್ಲಿ ಕೂಲಿ' ದರದ ಶೇ. 10ರಷ್ಟು ಹೆಚ್ಚುವರಿಯಾಗಿ ಪಾವತಿಸಬೇಕು (ಅಂದರೆ ರೂ. 12.50ರಷ್ಟು ಸೇರಿಸಿ ಒಟ್ಟು ರೂ.137.50ನ್ನು ಪಾವತಿಸಬೇಕು.)
- ಪ್ರತಿ ವಾರಾಂತ್ಯದಲ್ಲಿ ಕೂಲಿಯನ್ನು ಅವರಬ್ಯಾಂಕನ ಖಾತೆಗೆ ಜಮಾ ಮಾಡಬೇಕು. ಅನಿವಾರ್ಯವಾದ ಸಂದಭದಲ್ಲಿ 15 ದಿನಗಳಿಗೆ ಮೀರದಂತೆ ಕೂಲಿ ಪಾವತಿ ಮಾಡಬೇಕು.
- ಕುಟುಂಬದ ಜಂಟಿ ಉಳಿತಾಯ ಖಾತೆಗೆ ಅಥವಾ (ಕೆಲಸಗಾರರು ಬಯಸಿದರ) ವೈಯಕ್ತಿಕ ಉಳಿತಾಯ ಖಾತೆಗೆ ಜಮೆಮಾಡಬೇಕು.
- ಕಾರ್ಯ ನಿರ್ವಹಣಾ ಏಜೆನ್ಸಿ (ಸಂಬಂಧಿಸಿದ ಇಲಾಖೆಗಳು) ಯಾವುದೇ ಆದರೂ ಸಹ, ಅಕುಶಲ ಕೆಲಸಗಾರರ ಕೂಲಿಯನ್ನು ಗ್ರಾಮ ಪಂಚಾಯತಿ ಮಾಲಿಕವೇ ಪಾವತಿಸಬೇಕು.

**ಕಾಮಗಾರಿಗಳ ಗುಚ್ಛ:-**

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದಡಿಯಲ್ಲಿ ಕೈಗೊಳ್ಳಬಹುದಾದ ಕಾಮಗಾರಿಗಳಿಗೆ ಸಂಬಂಧಿಸಿದಂತೆ 9 ಆದ್ಯಾತೆ ವಲಯಗಳಲ್ಲಿ

ಗುರುತಿಸಲಾಗಿದೆ ಈ 9 ಆದ್ಯತೆ ವಲಯಗಳಿಗೆ ಅನುಗುಣವಾಗಿ ಕಾಮಗಾರಿಗಳನ್ನು ವಾರ್ಡ್ ಮತ್ತು ಗ್ರಾಮ ಸಭೆಗಳ ಮೂಲಕ ಗುರುತಿಸಿ ಅನುಷ್ಠಾನ ಮಾಡುವುದು ಕಡ್ಡಾಯವಾಗಿದೆ.

- ಜಲ ಸಂರಕ್ಷಣೆ ಮತ್ತು ನೀರಿನ ಕೊಯ್ಲು:
- ಹೊಸ ಕರಗಳ ನಿರ್ಮಾಣ, ನೀರನ್ನು ಇಂಗಿಸಲು ತಡೆ ಗೋಡೆಗಳ ಹಾಗೂ ಆಣೆಕಟ್ಟೆಗಳನ್ನು ನಿರ್ಮಾಣ ಮಾಡುವುದು.
- ಜಿನುಗು, ಕೆರೆ, ಕುಂಟ ಗೋಕಟ್ಟೆಗಳನ್ನು ನಿರ್ಮಾಣ ಮಾಡುವದು.
- ತಿರುವು ಕಾಲುವೆ. ಕಾಂಟೂರ್, ಬಂಡಿಂಗ್, ತೂಡು ಬಾವಿ (ಕಾಲೋವೆಲ್) ನಿರ್ಮಾಣ ಮಾಡುವುದು.

**2 . ಬರಗಾಲ ತಡೆಗಟ್ಟುವಿಕೆ (ಅರಣೀಕರಣ ಮತ್ತು ಗಿಡ ನೆಡುವುದು ಸೇರಿದಂತೆ)**

1. ಕೆರೆಗಳ ಆಸುಪಾಸು, ಕಾಲುವೆಗಳ ಏರಿಗಳು ಸರ್ಕಾರಿ ಖಾಲಿ ಸ್ಥಳಗಳಲ್ಲಿ ಗಿಡಗಳನ್ನು ಬೆಳೆಸುವುದು.
2. ಗೋಮಾಳ ರಸ್ತೆಗಳ ಅಕ್ಕ-ಪಕ್ಕ ಇತ್ಯಾದಿ ಸ್ಥಳಗಳಲ್ಲಿ ಗಿಡಗಳನ್ನು ಬೆಳೆಸುವುದು.
3. ಪಂಚಾಯತಿ ವ್ಯಾಪ್ತಿಯಲ್ಲಿ ಸರ್ಕಾರಿ ಖಾಲಿ ಜಮೀನ್ನು ಗುರುತಿಸಿ. ಅರಣ್ಯ ಬೆಳೆಸುವುದು.
4. ಸಸ್ಯಕ್ಷೇತ್ರ (ನರ್ಸರಿ)ಗಳನ್ನು ಬೆಳೆಸುವುದು.
5. ಸಸ್ಯಗಳ ಸಂರಕ್ಷಣಗೆ ಸ್ಥಳಿಯವಾಗಿ ರಕ್ಷಣಾ ಭೇಟಿ ಕಂದಕಗಳ ನಿರ್ಮಿಸುವುದು.

**3. ನಿರಾವರಿ ಕಾಲುವೆಗಳು (ಕಿರು ಮತ್ತು ಸಣ್ಣ ನೀರಾವರಿ ಕಾಲುವೆಗಳು ಸೇರಿದಂತೆ)**

- ಹೊಸ ನೀರಾವರಿ ಕಾಲುವೆಗಳನ್ನು ನಿರ್ಮಿಸುವುದು
- ಪೂರಕ ನಾಲೆಗಳು ಕ್ಷೇತ್ರ ಕಾಲುವೆಗಳ ನಿರ್ಮಾಣ ಮತ್ತು ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳುವುದು.

**4. ನೀರಾವರಿ ಸೌಲಭ್ಯ ಜಮೀನಿನ ಅಭಿವೃದ್ಧಿ ಮತ್ತು ತೋಟಗಾರಿಕೆ ಅಭಿವೃದ್ಧಿ ಪಡಿಸುವುದು ವೈಯಕ್ತಿಕ.**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಥವಾ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಅಥವಾ ಭೂ ಸುಧಾರಣಾ ಫಲಾನುಭವಿಗಳ ಅಥವಾ ಭಾರತ ಸರಕಾರದ ಇಂದಿರಾ ಅವಾಸ್ ಯೋಜನೆ ಫಲಾನುಭವಿಗಳ ಜಮೀನುಗಳಿಗೆ ನೀರಾವರಿ ಸೌಲಭ್ಯ ತೋಟಗಾರಿಕೆ ಮತ್ತು ಜಮಿನು ಅಭಿವೃದ್ಧಿಪಡಿಸುವುದು.

**5. ಭೂ ಅಭಿವೃದ್ಧಿ:**

- ಆರ್ಥಿಕವಾಗಿ ಹಿಂದುಳಿದ ವರ್ಗದವರು ಕೇಂದ್ರ/ರಾಜ್ಯ ಗ್ರಾಮೀಣ ಯೋಜನೆಗಳ ಫಲಾನುಭವಿಗಳ ಬಡಾವಣೆ ಅಭಿವೃದ್ಧಿ ಪಡಿಸುವುದು.
- ಗ್ರಾಮೀಣ ಪ್ರದೇಶದ ಸರ್ಕಾರಿ ಮತ್ತು ಅನುದಾನಿತ ಶಾಲಾ / ಕಾಲೇಜುಗಳ ಆಟದ ಮೈದಾನ ಅಭಿವೃದ್ಧಿಪಡಿಸುವುದು.

- ಸರಕಾರಿ ತೋಟಗಾರಿಕಾ ಫಾರ್ಮಗಳು ಕೃಷಿ ಕೇಂದ್ರಗಳು ಮೇವು ಕೇಂದ್ರಗಳು ಮೀನು ಸಾಕಾಣಿಕಾ ಕೇಂದ್ರಗಳನ್ನು ಅಭಿವೃದ್ಧಿಪಡಿಸುವುದು
- ರೇಷ್ಮೆ ಸಾಕಾಣಿಕಾ ಕೇಂದ್ರಗಳ ಭೂಮಿಯನ್ನು ಅಭಿವೃದ್ಧಿ ಪಡಿಸುವುದು

**ಉದ್ಯೋಗ ಮಿತ್ರ:**

- ರೈತ ಸುತೆಗಳ ಭೂಮಿಯನ್ನು ಅಭಿವೃದ್ಧಿಪಡಿಸುವುದು.
- ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನ ಹಂತದಲ್ಲಿ ಕಾಮಗಾರಿ ಪ್ರಕ್ರಿಯಗಳ ಸರಳವಾಗಿ ನಡೆಯಲು ಕಾರ್ಯ ನಿರ್ವಹಣಾ ಸಂಸ್ಥೆಗಳು (ಪಂಚಾಯತ್ ಇಂಜಿನೀಯರಿಂಗ್) ಜಲಾನೆಯನ, ಅರಣ್ಯ ಸಣ್ಣ ನೀರಾವರಿ ಇಲಾಖೆ ಇತ್ಯಾದಿ ಇಲಾಖೆಗಳಲಲು ಮತ್ತು ಅನುಷ್ಠಾನ ಸಂಸ್ಥೆಗಳಿಗೆ (ಜಿಲ್ಲಾ ಪಂಚಾಯತ ತಾಲ್ಲಾಕು ಪಂಚಾಯತಿ, ಗ್ರಾಮ ಪಂಚಾಯತಿ) ನೆರವಾಗಲು ಉದ್ಯೋಗ ಮಿತ್ರನನ್ನು ಆಯ್ಕೆ ಮಾಡಿಕೊಳ್ಳ ಅವಕಾಶವಿದೆ.
- ಉದ್ಯೋಗ ಮಿತ್ರನ ಆಯ್ಕೆ: ಗ್ರಾಮ ಸಭೆಯ ಮೂಲಕ ಉದ್ಯೋಗ ಮಿತ್ರರನ್ನು ಆಯ್ಕೆ ಮಾಡಬೇಕು.
- ಪ್ರತಿಯೊಂದು ಕಾಮಗಾರಿಗೆ, ಕಾಮಗಾರಿಯ ಸ್ಥಳದಲ್ಲಿ ಕೆಲಸ ಮಾಡುವವರ ಹಾಜರಾತಿಯನ್ನು ನಮಾದು ಮಾಡುವುದಕ್ಕೆ ಮತ್ತು ಮೇಲ್ವಿಚಾರಣೆಗಾಗಿ ಉದ್ಯೋಗ ಮಿತ್ರರನ್ನು ಆಯ್ಕೆ ಮಾಡಿ ಕೊಳ್ಳಲು ಅವಕಾಶವಿದೆ.
- ಉದ್ಯೋಗ ಮಿತ್ರರ ಆಯ್ಕೆಯಲ್ಲಿ ಮಹಿಳೆರಿಗೆ ಆದ್ಯತೆ ನೀಡಬೇಕು.

- ಉದ್ಯೋಗ ಮಿತ್ರರು ತಮ್ಮ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಲ್ಲಿ ಕನಿಷ್ಠ 5ನೇ ತರಗತಿ ವಿದ್ಯಾರ್ಹತೆ ಹೊಂದಿದ್ದರೆ.
- ಕಾಮಗಾರಿಯ ಸ್ಥಳದಲ್ಲಿ 10 ಕ್ಕಿಂತ ಹೆಚ್ಚು ಕೆಲಸಗಾರರಿದ್ದಲ್ಲಿ ಓರ್ವ ಉದ್ಯೋಗಮಿತ್ರ ಕಾಮಗಾರಿ ನಿರ್ವಹಣೆ ಮಾಡಬೇಕು.
- ಒಂದು ಕಾಮಗಾರಿಯಲ್ಲಿ ಸಾಮಾನ್ಯವಾಗಿ ದಿನಗೂಲಿ ಹಾಜರಾತಿ ಪಟ್ಟಿಯ ಅವಧಿ ಮುಕ್ತಾಯವಾದ ಮೇಲೆ ಎರಡು ವಾರಗಳಿಗೊಮ್ಮೆ ಉದ್ಯೋಗ ಮಿತ್ರರನ್ನು ಸರದಿಯ ಪ್ರಕಾರ ಬದಲಾಯಿಸಬೇಕು.
- ಉದ್ಯೋಗ ಮಿತ್ರರಿಗೆ ಕೊಠಡಿ ತರಬೇತಿ ಮತ್ತು ಪ್ರಾಯೋಗಿಕ ತರಬೇತಿಯನ್ನು ನೀಡಬೇಕು ಇಂತಹ ತರಬೇತಿಯನ್ನು ಉದ್ಯೋಗ ಮಿತ್ರರಿಗೆ ಗ್ರಾಮ ರೋಜಗಾರ ಸೇವಕ್ ಅಥವಾ ಗ್ರಾಮ ಪಂಚಾಯತಿ ಕಾರ್ಯದರ್ಶಿ / ಪಂಚಾಯತಿ ಅಭಿವೃದ್ಧಿ ಅಧಿಕಾರಿ ಜೊತೆಗ ಜಂಟಿಯಾಗಿ ನೀಡಬೇಕು.

**ಉದ್ಯೋಗ ಮಿತ್ರರ ಬಳಿ ಇರಬೇಕಾದ ಸಲಕರಣೆಗಳು:**

ಉದ್ಯೋಗ ಮಿತ್ರರಿಗೆ ಅಳತೆ ಮಾಡುವ ಟೇಪ್, ಕ್ಯಾಲ್ಕುಲೇಟರ್, ಪ್ರಥಮ ಚಿಕಿತ್ಸೆ ಪಟ್ಟಿಗೆ ಮತ್ತು ದೈನಂದಿನ ಅಳತೆಗಳನ್ನು ಹಾಗೂ ಇತರೆ ಅಂಶಗಳನ್ನು ದಾಖಲಿಸಿಕೊಳ್ಳುವುದಕ್ಕೆ ಡೈರಿ' ಇರುವ ಒಂದು ಬ್ಯಾಗನ್ನು ನೀಡಬೇಕು. ಇದಲ್ಲದೇ ಉದ್ಯೋಗ ಮಿತ್ರರಿಗೆ ಸಹಾಯವಾಣಿ ಮತ್ತು ತುರ್ತು

ಸಂದರ್ಭಗಳಲ್ಲಿ ಸಂಪರ್ಕಿಸಬೇಕಾದ ದೂರವಾಣಿ ಮತ್ತು ಮೊಬೈಲ್ ಸಂಖ್ಯೆಗಳನ್ನು ಸಹ ನೀಡಬೇಕು.

- ಜಾಗೃತಿ ಮತ್ತು ಉಸ್ತುವಾರಿ ಸಮಿತಿಯಲ್ಲಿ ಪರಿಶಿಷ್ಟ ಜಾತಿ ಪ. ಪಂಗಡ ಮತ್ತು ಮಹಿಳೆಯರಿಗೆ ಪ್ರತಿನಿಧ್ಯ ಇರಬೇಕು.
- ಸಮಿತಿಯ ಅವಧಿ ಒಂದು ವರ್ಷವಾಗಿರುತ್ತದೆ.
- ಸಮಿತಿಯು ಪ್ರತಿಯೊಂದು ಕಾಮಗಾರಿ ನಡೆಯುವ ಸ್ಥಳಕ್ಕೆ ವಾರದಲ್ಲಿ ಕನಿಷ್ಠ ಎರಡು ಬಾರಿ ಭೇಟಿ ನೀಡಿ ಈ ಕೆಳಕಂಡ ಅಂಶಗಳನ್ನು ಪರಿ ಶಿಲಿಸಬೇಕು.
- ಕಾಮಕಾರಿ ಸ್ಥಳದಲ್ಲಿ ಹಾಜರಾತಿ ಪಟ್ಟಿ ನಿರ್ವಹಣೆ.
- ಕಾಮಗಾರಿ ಸ್ಥಳದಲ್ಲಿನ ಸವಲತ್ತುಗಳು.
- ಕಾಮಗಾರಿಗಾಗಿ ಬಳಿಕ ಮಾಡಿರುವ ಸಾಮಗ್ರಿಗಳ ಗುಣಮಟ್ಟ ಹಾಗೂ ವೆಚ್ಚದ ವಿವರಗಳು.

**ಸಾಮಾಜಿಕ ಲೆಕ್ಕ ಪರಿಶೋಧನ ಸಮೀತಿ:**

ಪ್ರತಿ ಗ್ರಾಮ ಪಂಚಾಯತಿಯಲ್ಲಿ ಈ ಕೆಳಕಂಡ ಸದಸ್ಯರನ್ನುಳಗೊಂಡಂತೆ ಸಾಮಾಜಿಕ ಲೆಕ್ಕ ಪರಿಶೋಧನ ಸಮಿತಿಯನ್ನು ಗ್ರಾಮ ಸಭೆಯಲ್ಲಿ ಕಡ್ಡಾಯವಾಗಿ ರಚಿಸಬೇಕು.

- ಸಾಮಾಜಿಕ ಲೆಕ್ಕ ಪರಿಶೋಧ ಸಮಿತಿ ಸದಸ್ಯರ ಸಂಖ್ಯೆ ಇದು ಮೀರುತಿಲ್ಲ.

- ಸಮಿತಿಯ ಒಟ್ಟು ಸದಸ್ಯರಲ್ಲಿ ಮೂರನೆಯ ಒಂದು ಭಾಗದಷ್ಟು ಮಹಿಳಾ ಸದಸ್ಯರಿರಬೇಕು.
- ಹಾಲಿ ಹಾಗೂ ಹಿಂದಿನ ವರ್ಷಗಳಲ್ಲಿ ಕೆಲಸ ನಿರ್ವಹಿಸಿರುವ ಕೆಲಸಗಾರರು ಸಮಿತಿಯಲ್ಲಿರಬೇಕು.
- ಸಾಮಾಜಿಕ ಲೆಕ್ಕ ಪರಿಶೋಧನೆ ಸಮಿತಿಯು ತನ್ನ ಪರಿಶೀಲನಾ ವರದಿ ಹಾಗೂ ಜಾಗೃತ ಮತ್ತು ಉಸ್ತುವಾರಿ ಸಮಿತಿಗಳ ಕ್ರೋಢೀಕೃತ ವರದಿಗಳನ್ನು ಗ್ರಾಮ ಸಭೆಯಲ್ಲಿ ಓದಿ ತಿಳಿಸಬೇಕು.
- ಹಿಂದಿನ ಸಾಮಾಜಿಕ ಲೆಕ್ಕ ಪರಿಶೋಧನೆ ವರದಿ / ನಡಾವಳಿಯ ಮೇಲೆ ಕೈಗೊಂಡ ಕ್ರಮಗಳ ಕುರಿತು ಗ್ರಾಮಸಭೆಯಲ್ಲಿ ಮಂಡಿಸಬೇಕು.
- ಗ್ರಾಮ ಸಭೆಯಲ್ಲಿ ಹಾಜರಿರುವ ಎಲ್ಲಾ ಸದಸ್ಯರ ಹಾಜರಾತಿಯನ್ನು ಸಭೆಯ ಮುನ್ನ ಮತ್ತು ನಂತರದಲ್ಲಿ ಪಡೆಯಬೇಕು.

➢ **ಕುಂದು-ಕೊರತೆ ನಿವಾರಣೆ ಅಧಿಕಾರ (ನಿಯಮ-3)**

ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯತಿ ಕಾರ್ಯದರ್ಶಿ / ಪಂಚಾಯತಿ ಅಭಿವೃದ್ಧಿ ಅಧಿಕಾರಿ ತಾಲೂಕು ಮಟ್ಟದಲ್ಲಿ ಕಾರ್ಯಕ್ರಮ ಅಧಿಕಾರಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ ಮತ್ತು ರಾಜ್ಯ ಮಟ್ಟದಲ್ಲಿ ಆಯುಕ್ತರು (ನಿರ್ದೇಶಕರು) ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಇವರು ಕುಂದು ಕೊರತೆ ನಿವಾರಣಾ ಅಧಿಕಾರಯಾಗಿರುತ್ತಾರೆ.

ಯೋಜನಾ ವರದಿ

> **ದೂರುಗಳನ್ನು ಸಲ್ಲಿಸುವ ವಿಧಾನ (ನಿಯಮ)**

- ಯಾವುದೇ ವ್ಯಕ್ತಿಯು ನಿರ್ದಿಷ್ಟಪಡಿಸಲಾದ ವಿವಿಧ ಮಟ್ಟಗಳಲ್ಲಿನ ಕುಂದು-ಕೊರತೆ ನಿವಾರಣಾ ಅಧಿಕಾರಿಗೆ ತನ್ನ ಕುಂದು ಕೊರತೆ ಅರ್ಜಿಯನ್ನು ಸಲ್ಲಿಸಬಹುದು.
- ದೂರುಗಳನ್ನು ಬರವಣಿಗೆ ಬಾಯಿ ಮಾತ್ರ, ಅಂಚೆ ಮೂಲಕ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ವೆಬ್‌ಸೈಟ್ ಮೂಲಕ ಅಥವಾ ಸ್ಥಾಪಿಸಲಾದ ಸಹಾಯವಾಣಿ (ಉಚಿತ ಕರೆಸಂಖ್ಯಾ 18004258666) ಮೂಲಕ ಸಲ್ಲಿಸಬಹುದಾಗಿದೆ.
- ಕಾರ್ಯದರ್ಶಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅಥವಾ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯು ದೂರುಗಳ ರಿಜಿಸ್ಟರ್‌ನಲ್ಲಿ ವಿವರಗಳನ್ನು ದಾಖಲಿಸಬೇಕು ಮತ್ತು ಫಿರ್ಯಾದುದಾರನ ಸಹ ಅಥವಾ ಹಬ್ಬಗಳು ಗುರುತನ್ನು ಪಡೆಯಬೇಕು.
- ಫಿರ್ಯಾದುದಾರರು ಕುಂದು-ಕೊರತೆ ದೂರು ಅರ್ಜಿಯನ್ನು ಸಲ್ಲಿಸುವಾಗ ನಿರ್ಧಿಷ್ಟ ವಿವರಗಳನ್ನೊಳಗೊಂಡ ಸಂಪರ್ಕ ವಿಳಾಸ ಸಹಿತ ಸಲ್ಲಿಸಬೇಕು.

> **ದೂರುಗಳನ್ನು ಸಲ್ಲಿಸಲು ಅನುಕೂಲವಾಗುವಂತೆ ದೂರು ಪಟ್ಟಿಗಗಳನ್ನು ಇಡಬೇಕು (ನಿಯಮ-5)**

- ಕುಂದು-ಕೊರತೆಗಳ ನಿವಾರಣಾ ಅಧಿಕಾರಿಗಳ ಕಛೇರಿಯಲ್ಲಿ ಸಾರ್ವಜನಿಕ ದೂರುಗಳನ್ನು ಸಲ್ಲಿಸಲು ಅನುಕುಲವಾಗುವಂತೆ ದೂರು ಪಟ್ಟಿಗಗಳನ್ನು ಎದ್ದು ಕಾಣುವ ಸ್ಥಳಗಳಲ್ಲಿ ಇಡಬೇಕು

ಪೆಟ್ಟಿಗೆಗಳನ್ನು ಕನಿಷ್ಠ ಮೂರು ದಿನಗಳಿಗೆ ಒಮ್ಮೆಯಾದರು ತೆರೆಯಬೇಕು ಮತ್ತು ಬಂದಿರುವ ದೂರುಗಳನ್ನು ದೂರು ದಾಖಲಾತಿ ರಿಜಿಸ್ಟರಿನಲ್ಲಿ ದಾಖಲಿಸಿ ಕೂಡಲೇ ಕ್ರಮ ಕೈಗೊಳ್ಳಬೇಕು.

> **ದೂರುಗಳ ವಿಲೇವಾರಿಯ ಮೇಲ್ವಿಚಾರಣೆ (ನಿಯಮ-9)**

ಯೋಜನೆಗೆ ಸಂಬಂಧಿಸಿ ದೂರುಗಳ ವಿಲೇವಾರಿಯ ಮೇಲ್ವಿಚಾರಣೆಗಾಗಿ ಜಿಲ್ಲಾ ಮಟ್ಟದಲ್ಲಿ ಒಂದು ಸಮಿತಿ ಇರುತ್ತ ಸಮಿತಿಯ ರಚನೆಯು ಈ ಕೆಳಕಂಡಂತೆ ಇರುತ್ತದೆ.

- ಜಿಲ್ಲೆಯ ಜಿಲ್ಲಾಧಿಕಾರಿ - ಅಧ್ಯಕ್ಷರು
- ಮುಖ್ಯಕಾರ್ಯನಿರ್ವಾಹಿಕ ಅಧಿಕಾರಿ, ಜಿಲ್ಲಾ ಪಂಚಾಯತಿ -> ಸದಸ್ಯ
- ಜಿಲ್ಲೆಯ ಒರ್ವ ವಿಭಾಗಾಧಿಕಾರಿ & ಒರ್ವ ತಹಸಿಲ್ದಾರ -> ಸದಸ್ಯ
- ಜಿಲ್ಲೆಯ ಒರ್ವ ಕಾರ್ಯನಿರ್ವಹಕ ಅಧಿಕಾರಿ -> ಸದಸ್ಯ
- ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಯಾವುದೇ ಸ್ವಯಂ ಸೇವಾ ಸಂಸ್ಥೆಯ ಒರ್ವ ಸದಸ್ಯ-> ಸದಸ್ಯ
- ನಿರ್ವಹಿಸುವ ಜಿಲ್ಲಾ ಪಂಚಾಯತಿಯ ಉಪ ಕಾರ್ಯಕದರ್ಶಿ-> ಸದಸ್ಯ ಕಾರ್ಯದರ್ಶಿ
- ಸಮಿತಿಯ ಪ್ರತಿ ತಿಂಗಳಲ್ಲಿ ಕನಿಷ್ಠ ಒಂದು ಬಾರಿಯಾದರೂ ದೂರುಗಳ ವಿಲೇವಾರಿಯ ಪ್ರಗತಿಯನ್ನು ಪರಿಶೀಲಿಸಬೇಕು

# ಅಧ್ಯಾಯ - 4

**ಪ್ರಾಕಲ್ಪನೆ:-** ಪ್ರಾಕಲ್ಪನೆ ಎಂದರೆ ಒಂದು ವಿಷಯದ ಬಗ್ಗೆ ಮುಂದಾಲೋಚನೆ ಮುಂಚಯೇ ನಾವು ವಿಷಯದ ಬಗ್ಗೆ ಮಾಡುವ ಕಲ್ಪನೆ ಎಂದು ಹೇಳಬಹುದು ಸಂಶೋಧನಾ ವಿಷಯಕ್ಕೆ ಸಂಬಂಧಿಸಿದ ಪ್ರಾಥಮಿಕ, ದ್ವಿತೀಯ ಮಾಹಿತಿ ಅನುಭಗಳು ಕ್ಷೇತ್ರ ಭೇಟಿ ಇವುಗಳ ಆಧಾರದ ಮೇಲ ಸಂಶೋಧನೆ ರಚಿಸುವ ಒಂದು ತಾತ್ಕಲಿಕ ಸಿದ್ಧಾಂತ ಪ್ರಾಕಲ್ಪನೆ ಎನ್ನುವರು.

ಇದು ಅಸಮಾಧಾನಕರ ಮಾಹಿತಿಯನ್ನು ನಿಯಂತ್ರಿಸುತ್ತದೆ ಪ್ರಸ್ತುತ ವಿಷಯದ ಅಧ್ಯಾಯನಕ್ಕೆ ಸಂಬಂಧಿಸಿದ ಸಂಶೋಧನೆಯ ಈ ಕೆಳಗಿನ ಪ್ರಾಕಲ್ಪನೆಯನ್ನು ರಚಿಸಿಕೊಂಡಿದ್ದಾರೆ.

**ನಮೂನೆಯ ಅಥವಾ ಮಾದರಿ ವಿಧಾನ:**

ನಮೂನೆ ಅಥವಾ ಮಾದರಿ ವಿಧಾನ ಎಂಬುವುದು ಸಮಾಜಕಾರ್ಯ ಸಂಶೋಧನೆಯಲ್ಲಿ ಅನುಸರಿಸಲಾಗುತ್ತಿರುವ ಮುಖ್ಯ ಕ್ರಮಗಳಲ್ಲೊಂದು ಸಾಮಾಜಿಕ ಕಾರ್ಯ ಸಂಶೋಧನೆಯ ಕ್ಷೇತ್ರವು ಬಹಳ ಕಷ್ಟಕರ ಆದ್ದರಿಂದ ಈ ಕ್ಷೇತ್ರದ ಸಾಮಾನ್ಯ ಗುಣಗಳನ್ನು ಹೊಂದಿರುವವರೊಂದಿಗೆ ಅದನ್ನು ಪ್ರತಿನಿಧಿಸಬಹುದಾದಂತೆ ಅದರ ಭಾಗವಂದನ್ನು ಅಧ್ಯಾಯನ ದೃಷ್ಟಯಿಂದ ಆಯ್ಕು ಕೊಳ್ಳುವುದಕ್ಕೆ ನಮೂನೆಯ ವಿಧಾನ ಅಥವಾ ಮಾದರಿಯ ವಿಧಾನ ಎಂದು ಕರೆಯುತ್ತಾರೆ.

❖ **ನಮೂನೆಯ ವ್ಯಾಖ್ಯಗಳು:**

**ಎನ್.ಜಿ.ಸ್ವೆಲ್‌ರ್ ರವರ ಪ್ರಕಾರ:**

ನಮೂನೆಯ ಹೇಗಿರುತ್ತದೆ ಅದರಲ್ಲಿ ಬೃಹತ್ ಜನಸಂಖ್ಯೆಯಗೆ ಸೇರಿದ ಪ್ರತಿಯೊಂದು ಮಾಲಾಂಶಕ್ಕೂ ಅಥವಾ ಅಂತಹ ಮಾಲಾಂಶಗಳ ಪ್ರತಿಯೊಂದು ಸಮಸ್ಯೆಗೂ ನಮೂನೆಯಲ್ಲಿ ಸೇರ್ಪಡೆಗೊಳ್ಳುವಂತಹ ಅರ್ಥವಿರುತ್ತದೆ.

**ಮಾಹಿತಿ ಸಂಗ್ರಹಣೆಯ ವಿಧಾನಗಳು**:

ಮಾಹಿತಿ ಸಂಗ್ರಹಣೆ: ಸಂಶೋಧನಾ ವಿನ್ಯಾಸವು ಯಾವುದೆಂಬುದನ್ನು ವ್ಯಾಖಾನಿಸಿದ ಮೇಲೆ ಮತ್ತು ಅದಕ್ಕೆ ಅನುಗುಣವಾದ ಸಂಶೋಧನಾ ವಿನ್ಯಾಸವನ್ನು ರಚಿಸಿದ ಮೇಲೆ ಸಂಶೋಧಕನ ಬಹಳ ಪ್ರಾಮುಖ್ಯ ನೀಡುವ ಸಂಶೋಧನಾ ಘಟವೇ ಮಾಹಿತಿಗಳ ಅಥವಾ ದತ್ತಾಂಶಗಳ ಸಂಗ್ರಹಣೆ ಸಂಶೋಧನೆಗಾಗಿ ಆಯ್ಕೆ ಮಾಡಿರುವ ವಿಷಯದ ಬಗ್ಗೆ ವಿವಿಧ ಮೂಲಗಳಿಂದ ರೂಢಿಯಲ್ಲಿರುವ ಸಂಶೋಧನಾ ತಂತ್ರಗಳನ್ನು ಉಪಯೋಗಿಸಿ ವಿಷಯಗಳನ್ನು ಸಂಗ್ರಹಿಸುವ ಕ್ರಮಕ್ಕೆ ಮಾಹಿತಿ ಸಂಗ್ರಹಣೆ ಎನ್ನುವುದು.

**ಮಾಹಿತಿ ಸಂಗ್ರಹಣೆಯ ವಿಧಾನಗಳು:**

ಡಬ್ಲ್ಯೂ, ಎ. ಬ್ಯಾಗಲೆ ರವರ ಪ್ರಕಾರ: ಮಾಹಿತಿ ಸಂಗ್ರರುಣೆಯನ್ನು ಎರಡು ವಿಧಾನಗಳಲ್ಲಿ ಸಂಗ್ರಹಿಸಬಹುದೆಂದು ತಿಳಿಸಿದ್ದಾರೆ ಅವುಗಳೆಂದರೆ

- ಪ್ರಾಥಮಿಕ ಮೂಲಗಳು

• ಮಾಧ್ಯಾಮಿಕ ಮೂಲಗಳು

**ಪ್ರಾಥಮಿಕ ಮೂಲಗಳು:**

ಸಂಶೋಧಕನು ತಾನು ಕಾರ್ಯಪ್ರವೃತ್ತ ನಾಗಿರು ವಾಸ್ತವಿಕ ಕ್ಷೇತ್ರದಿಂದ ನೇರವಾಗಿ 'ಸಿಬ್ಬಂದಿ ವರ್ಗದವರು ತರಬೇತಿ ಅಧಿಕಾರಿಗಳು ಸಂಪನ್ಮೂಲ ವ್ಯಕ್ತಿಗಳ ಮೂಲಕ ಪ್ರಶ್ನಾವಳಿ ಸಂದರ್ಶನ ಹಾಗೂ ಅವಲೋಕನಗಳನ್ನು ಬಳಸಿ ಸಂಶೋಧಕನು ಮಾಃಇತಿ ಸಂಗ್ರಹ ಮಾಡುವ ವಿಧಾನವಾಗಿದ.

**ಮಾಧ್ಯಮಿಕ ಮೂಲಗಳು:**

**ಪ್ರಶ್ನಾವಳಿ:**

ಸಾಮಾಜಿಕ ಸಂಶೋಧಗಳಲ್ಲಿ ಮಾಹಿತಿಯನ್ನು ಸಂಗ್ರಹಿಸಲು ಪ್ರಶ್ನಾವಳಿ ವಿಧಾನವನ್ನು ಬಳಸುವುದು ಈಗ ಸರ್ವೆ ಸಾಮಾನ್ಯವಾಗಿದೆ ಜನರ ವ್ಯಕ್ತಿಗತ ನಂಬಿಕೆಗಳ ಮನೋಭಾವನೆಗಳು ದೃಷ್ಟಿಕೋನ ವರ್ತನೆಯ ನಮೂನೆಗಳು ವ್ಯಯಕ್ತಿ ಆಸಕ್ತಿ ಅಭಿರುಚಿ ಹಾಗೂ ಆಯ್ಕೆಗಳು ಸಮಾಹದ ನಂಬಿಕೆಗಳು ಆಚರಣೆಗಳು ಮತ್ತು ಅಭ್ಯಾಸಗಳು ಮುಂತಾದವುಗಳಿಗೆ ಸಂಬಂಧಿಸಿದ ಮಹತ್ವದ ಮೂಹಿತಿಯನ್ನು ಸಂಗ್ರಹಿಸುವರೂ ಪ್ರಶ್ನಾವಳಿಯ ಬಹಳಷ್ಟು ಸಹಾಯಕವಾದುದು.

**ಗೊಡೆ ಮತ್ತು ಹ್ಯಾಟ್:** ಎಂಬುವರ ಪ್ರಕಾರ ಪ್ರಶ್ನಾವಳಿ ಎಂಬುದು ಪ್ರಶ್ನೆಗಳಿಗೆ ಉತ್ತರಗಳನ್ನು ಸಂಗ್ರಹಿಸುವ ಒಂದು ತಂತ್ರ ಸಾಧನವಾಗಿದು ಇದರಲ್ಲಿ ಬಳಸಲ್ಪಡುವ ಪ್ರಶ್ನೆಗಳ ಫಾರ್ಮನ್ನು ಮಾಹಿತಿ ನೀಡುವವನು ತಾನೇ ಸ್ವತಃ ಭರ್ತಿ ಮಾಡಕೂಡುತ್ತನೆ.

**ಅವಲೋಕನ ವಿಧಾನ:-**

ಅವಲೋಚನ ಎಂಬುದು ಒಂದು ಉದ್ದೇಶ ಪೂರ್ವಕವಾದ ವೀಕ್ಷಣೆಯಾಗಿದೆ ಈ ಅವಲೋಕನ ವಿಧಾನದಿಂದ ನೇರವಾಗಿ ಸಂಶೋಧಕನ ಕುಸುನೂರ ಗ್ರಾಮದಲ್ಲಿ ಕಾಣುವ ಅಂಶಗಳನ್ನು ತಿಳಿಯಬಹುದು ಸಂಶೋಧನಾ ಕ್ಷೇತ್ರವನ್ನಾಗಿ ಆಯ್ಕೆ ಮಡಿಕೊಂಡು "ಕುಸನೂರ ಗ್ರಾಮದಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಮೌಲ್ಯಮಾಪನದ" ಕುರಿತು ಅಧ್ಯಾಯನ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಅವಲೋಕನ ಮಾಡಲು ಅನುಕೂಲವಾಗಿದೆ.

**ಮನೆಭೇಟಿ:**

ಈ ವಿಧಾನದಲಿ ಮಾಹಿತಿದಾರರಿಗೆ ಭೇಟಿ ಮಾಡಲಾಯಿತು ಇದರಿಂದ ಅಲ್ಲಿನ ವಾಸ್ತವ ಸ್ಥಿತಿಯನ್ನು ತಿಳಿಯಲಾಯಿತು ಅಲ್ಲದೆ ಅವರು ಪಡೆಯುವ ಸೌಲಭ್ಯಗಳು ಯಾವವು ಎಂಬುದನ್ನು ತಿಳಿಯಲಾಯಿತು.

**ಸಂದರ್ಶನ:**

ಇಲ್ಲಿ ಕುಟುಂಬಗಳಲ್ಲಿ ಒಂದೂರ ಮನೆಯನ್ನು ಸಂದರ್ಶನೆಸಲಾಯಿ ಮತ್ತು ಇವರಿಂದ ಕಲಿವು ಮಾಹಿತಿ ಕಲೆಹಾಕಲಾಯಿತು ಸಹಾಯಕವಾಯಿತು.

ಅಧ್ಯಾಯನದ ವ್ಯಾಪ್ತಿ: ಕುಸನೂರ ಗ್ರಾಮದಲ್ಲಿ ಉದ್ಯೋಗ ಯೋಜನೆಯ ಮೌಲ್ಯಮಾಪನದ ಕುರಿತು ಸಂಶೋಧನೆಯನ್ನು ಗಲಬರ್ಗಾ ತಾಲೂಕಿನ ಕುಸುನೂರ ಗ್ರಾಮದಲ್ಲಿ ಮಾಹಿತಿಯನ್ನು ಪಡೆದುಕೊಳ್ಳಲಾಯಿತ್ತು.

# ಅಧ್ಯಾಯ – 5

## 01) ಮಾಹಿತಿದಾರರ ವೈಯಸ್ಸು

**ಕೋಷ್ಟಕ-1**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | 18-25 | 26 | 60% |
| 2. | 26-35 | 06 | 15% |
| 3. | 36-50 | 05 | 12.5% |
| 4. | 51- ಮೇಲ್ಪಟ್ಟ | 05 | 12.5% |
| | ಒಟ್ಟು | 40 | 100% |

ಈಮೇಲಿನ ಕೋಷ್ಟಕದ ಅನ್ವಯ ಕುಸುನೂರು ಗ್ರಾಮದಲ್ಲಿ 40 ಜನರು ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದು ಶೇಕಡಾ 60% ಜನರು 18 ರಿಂದ 25 ವಯಸ್ಸಿನವರಿದ್ದಾರೆ ಎಂದು ಸಮೀಕ್ಷೆಯಲ್ಲಿ ತಿಳಿದು ಬಂದಿದೆ.

## 02) ಮಾಹಿದಾರರ ಶಿಕ್ಷಣ

**ಕೋಷ್ಟಕ-2**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಅನಕ್ಷರಸ್ಥ | 08 | 20% |
| 2. | 1 ರಿಂದ 7 | 16 | 40% |
| 3. | 8 ರಿಂದ 10 | 09 | 22.5% |
| 4. | 11 ರಿಂದ ಪದವಿ | 07 | 17.5% |
| | ಒಟ್ಟು | 40 | 100% |

ಈ ಒಂದು ಸಮೀಕ್ಷೆಯಲ್ಲಿ 1 ರಿಂದ 7 ನೇ ವರ್ಗದವರು ಅಂದರೇ ಶೇ 40% ಜನರು ಶಿಕ್ಷಣ ಹೊಂದಿದ್ದಾರೆ ಮತುತ ಅನಕ್ಷರಸ್ಥೆಯು ಕೂಡಾ ಶೇ 20% ಕಂಡುಬಂದಿದೆ.

03) ಮಾಹಿತಿದಾರರ ವಾರ್ಷಿಕ ಆದಾಯ

**ಕೋಷ್ಟಕ-3**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | 10,0000 | 20 | 50% |
| 2. | 15,000 | 09 | 22.5% |
| 3. | 50,000 | 11 | 27.5% |
| 4. | ಮೂಲಪಟ್ಟ | 00 | 00% |
| | ಒಟ್ಟು | 40 | 100% |

ಈ ಗ್ರಾಮದಲ್ಲಿ ಶೇಕಡಾ 50% ರಷ್ಟು ಜನರ ಆದಾಯವು 10,000 ಇದೇ ಶೇ 27.5% ರಷ್ಟು ಜನರು 50,000 ಆದಾಯವನ್ನು ಹೊಂದಿದ್ದಾರೆ.

04) ಮಾಹಿತಿದಾರರ ಉದ್ಯೋಗ?

**ಕೋಷ್ಟಕ-4**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಕೂಲಿ | 06 | 15% |
| 2. | ಕೃಷಿ | 25 | 62.5% |
| 3. | ನೌಕರಿ | 03 | 7.5% |
| 4. | ಇತರೆ | 06 | 15% |
| | ಒಟ್ಟು | 40 | 100% |

ಈ ಮೇಲೆ ತಿಳಿಸಿರುವ ಕೊಷ್ಟಕದ ಅನ್ವಯ ಶೇಕಡಾ 62.5% ಜನರು ಕೃಷಿಯನ್ನು ಮಾಡುತ್ತಾರೆ ಮತ್ತು ಶೇ 15% ಕೂಲಿ ಕೆಲಸವನ್ನು ಮಾಡುತ್ತಾರೆ ಎಂದು ತಿಳಿದು ಬರುತ್ತದೆ

05) ಮಾಹಿತಿದಾರರ ಧರ್ಮ

**ಕೋಷ್ಟಕ-5**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹಿಂದು | 28 | 70% |
| 2. | ಮುಸ್ಲಿಂ | 05 | 12% |
| 3. | ಕ್ರಿಶ್ಚನ | 03 | 07.5% |
| 4. | ಇತರ | 04 | 10% |
| | ಒಟ್ಟು | 40 | 100% |

ಈ ಒಂದು ಕುಸುನೂರು ಗ್ರಾಮದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಿಂದು ಧರ್ಮದವರು ಅಂದರೆ ಶೇ 70% ಇಲ್ಲಿ ವಾಸಿಸುತ್ತಾರೆ ಎಂದು ಹೇಳಬಹುದು ಮತ್ತು ಮುಸ್ಲಿಂ ಕೂಡಾ ಶೇ 12.5% ರಷ್ಟು ಜನರಿದ್ದಾರೆ.

06) ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಮಾಹಿತಿ ಇದೇಯೇ

**ಕೋಷ್ಟಕ-6**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 36 | 95% |
| 2. | ಇಲ್ಲ | 02 | 0.5% |
| | | 40 | 100% |

ಈ ಗ್ರಾಮದಲ್ಲಿ ಶೇ 95% ಜನರು ಈ ಯೋಜನೆಯ ಬಗ್ಗೆ ಮಾಹಿತಿ ಇದೆ ಎಂದು ವಿವರಿಸಿದ್ದಾರೆ ಮತ್ತು ಶೇ 5% ಇಲ್ಲಾ ಎಂದು ಈ ಸಮೀಕ್ಷೆಯಿಂದ ತಿಳಿದು ಬರುತ್ತಿದೆ.

07) ನಿಮ್ಮ ಗ್ರಾಮ ಪಂಚಾಯತಿಯಲ್ಲಿ ಈ ಯೋಜನೆಯ ಬಗ್ಗೆ ಸಭೆಯನ್ನು ಮಾಡುತ್ತಿರಾ

**ಕೋಷ್ಟಕ-7**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 25 | 62.05% |
| 2. | ಇಲ್ಲ | 15 | 37.05% |
| | ಒಟ್ಟು | 40 | 100% |

ಕುಪನೂರು ಗ್ರಾಮದಲ್ಲಿ 40 ಜನರ ಸಮೀಕ್ಷೆಯಲ್ಲಿ ಶೇ 62.5% ಜನರು ಹೌದು ಎಂದಿದ್ದಾರೆ ಮತ್ತು ಶೇ 37.05% ಇಲ್ಲಾ ಎಂದು ವಿವರಿಸಿದ್ದಾರೆ.

08) ನೀವು ಈ ಯೋಜನೆಯಲ್ಲಿ ಕೆಲಸ ಮಾಡಲು ಬಯಸುತ್ತಿರಾ

**ಕೋಷ್ಟಕ-8**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 20 | 50% |
| 2. | ಇಲ್ಲ | 20 | 50% |
| | ಒಟ್ಟು | 40 | 100% |

ಈ ಕೊಷ್ಟಕದಲ್ಲಿ ಜನರ ಪ್ರತಿಕ್ರಿಯುವ ಶೇ 50% ಹೌದು ಮತ್ತು ಶೇಕಡಾ 50% ಇಲ್ಲ ಎಂದುತಿಳಿಸಿದ್ದಾರೆ.

9) ಈ ಯೋಜನೆಯು ನಿಮ್ಮ ಗ್ರಾಮಕ್ಕೆ ಅವಶ್ಯಕವೆ

**ಕೋಷ್ಟಕ-9**

| ಕ್ರ. ಸಂಖ್ಯೆ | ಪ್ರತಿಕ್ರಿಯೆ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 00 | 00% |
| 2. | ಇಲ್ಲ | 40 | 100% |
| | ಒಟ್ಟು | 40 | 100% |

ಈ ಯೋಜನೆಯು ಈ ಗ್ರಾಮದಲ್ಲಿ ಶೇ 100% ಅವಶ್ಯಕ ಎಂದಿದ್ದಾರೆ. ಎಂದು ಸಮೀಕ್ಷೆಯಿಂದ ತಿಳಿದುಬರುತ್ತದೆ.

10) ಈ ಯೋಜನೆಯಲ್ಲಿ ನೀವು ಬ್ಯಾಂಕ್ ಖಾತೆಯನ್ನು ತೆಗೆದುಕೊಂಡಿದ್ದೀರಾ

**ಕೋಷ್ಟಕ-10**

| ಕ್ರ. ಸಂಖ್ಯೆ | ಪ್ರತಿಕ್ರಿಯೆ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 36 | 90% |
| 2. | ಇಲ್ಲ | 04 | 10% |
| | ಒಟ್ಟು | 40 | 100% |

ಮೇಲಿನ ಕೋಷ್ಟಕದ ಅನ್ವಯ 40 ಜನರ ಸಮಿಕ್ಷೆಯಲ್ಲಿ ಶೇ 90% ಬ್ಯಾಂಕ ಖಾತೆಯನ್ನು ತೆಗೆದುಕೊಂಡಿದ್ದಾರೆ ಮತ್ತು ಶೇ 10% ಇನ್ನೂ ತೆಗೆದುಕೊಂಡಿಲ್ಲಾ.

ಈ ಯೋಜನೆಯಿಂದ ನಿಮ್ಮಗೆ ಉದ್ಯೋಗ ಚೀಟಿಯನ್ನು ನೀಡಿದ್ದಾರೆಯೇ

**ಕೋಷ್ಟಕ-11**

| ಕ್ರ.ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 10 | 25% |
| 2. | ಇಲ್ಲಾ | 30 | 75% |
| | ಒಟ್ಟು | 40 | 100% |

ಈ ಒಂದು ಸಮೀಕ್ಷೆಯಪ್ರಕಾರ ಶೇಕಡಾ 75% ಜನರು ಉದ್ಯೋಗ ಚೀಟಿಯನ್ನು ಹೊಂದಿದ್ದಾರೆ

ನಿಮ್ಮಗೆ ನಿರೋದ್ಯೋಗ ಭತ್ಯ ಕುರಿತು ಮಾಹಿತಿ ಇದೆಯಾ

**ಕೋಷ್ಟಕ-12**

| ಕ್ರ.ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 03 | 7.5% |
| 2. | ಇಲ್ಲಾ | 37 | 92.5% |
| | ಒಟ್ಟು | 40 | 100% |

ಈ ಒಂದು ಗ್ರಾಮದಲ್ಲಿ, ಈ ಯೋಜನೆಯಲ್ಲಿ ನಿರೂದ್ಯೋಗ ಭತ್ಯ ಕುರಿತು ಮಾಹಿತಿ ಶೇ.

92.5% ಜನರು ಇಲ್ಲಾ ಎಂದು ಈ ಸಮೀಕ್ಷೆಯಿಂದ ತಿಳಿದು ಬರುತ್ತಿದೆ.

13) ಈ ಯೋಜನೆಯಲ್ಲಿ ಅಧಿಕಾರಿಗಳು ಸರಿಯಾಗಿ ಸಹಕರಿಸಿದ್ದಾರೆಯೇ ?

**ಕೋಷ್ಟಕ-13**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 21 | 52.5% |
| 2. | ಇಲ್ಲ | 19 | 47.5% |
| | ಒಟ್ಟು | 40 | 100% |

ಈ ಸಮೀಕ್ಷೆಯ ಪ್ರಕಾರ 52% ಜನರು ಸರಿಯಾಗಿ ಸಹಕರಿಸಿದ್ದಾರೆಯ ಎಂದು

ತಿಳಿಸಿದ್ದಾರೆ.

14) ಈ ಯೋಜನೆಯಲ್ಲಿ ನಿಮಗೆ ಕೂಲಿದರ ಬಗ್ಗೆ ಮಾಃಇತಿ ಇದೆಯೇ

**ಕೋಷ್ಟಕ-14**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 17 | 42.5% |
| 2. | ಇಲ್ಲ | 20 | 57.5% |
| | ಒಟ್ಟು | 40 | 100% |

ಶೇಕಡಾ 57.5 ರಷ್ಟು ಜನರಿಗೆ ಈ ಯೋಜನೆಯಲ್ಲಿ ಕೂಲಿ ದರದ ಬಗ್ಗೆ ಮಾಹಿತಿ ಇದೆ ಎಂದು

ತಿಳಿಸಿದ್ದಾರೆ.

...ಗಾದರೆ ಈ ಯೋಜನೆಯಲ್ಲಿ ಕೂಲಿದರ ಎಷ್ಟು ಇದೇ

**ಕೋಷ್ಟಕ-15**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | 82.00 | 05 | 12.5% |
| 2. | 75.00 | 01 | 2.5% |
| 3. | 125.00 | 34 | 85% |
| 4. | 50.00 | 00 | 00% |
| | ಒಟ್ಟು | 40 | 100% |

...ಮೇಲ ತಿಳಿಸಿದ ಕೋಷ್ಟಕದಲ್ಲಿ 40ಜನರ ಸಮೀಕ್ಷೆಯಲ್ಲಿ ಶೇಕಡಾ 85% ಜನರು 125ರೂ ಇದ.

...ಮು ತಿಳಿಸಿದ್ದಾರೆ.

...ಅಂಗವಿಕಲ ಅಥವಾ ವಿಕಲಚೇತನರಿಗೆ ಇದರಲ್ಲಿ ಉದ್ಯೋಗ ವಿದೇಯೇ ಕೋಷ್ಟಕ-16

**ಕೋಷ್ಟಕ-16**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 30 | 75% |
| 2 | ಇಲ್ಲಾ | 10 | 25% |
| | ಒಟ್ಟು | 40 | 100% |

ಕುಸನೂರ ಗ್ರಾಮದಲ್ಲಿ ಶೇಕಡಾ 75% ಜನರು ಈ ಯೋಜನೆಯಲ್ಲಿ ಅಂಗವಿಕಲರಿಗೆ

...ದ್ಯೋಗ ಇದೆ. ಎಂದು ವ್ಯಕ್ತಪಡಿಸಿದರು.

17) ಈ ಯೋಜನೆಯಿಂದ ನಿಮ್ಮ ಗ್ರಾಮದಲ್ಲಿ ವಲಸೆ ಪ್ರಮಾಣ ಕಡಿಮೆ ಯಾಗಿದೆ

**ಕೋಷ್ಟಕ-17**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 26 | 65% |
| 2. | ಇಲ್ಲ | 14 | 35% |
| | ಒಟ್ಟು | 40 | 100% |

ಈ ಮೇಲಿನ ಕೊಷ್ಟಕದ ಪ್ರಕಾರ ಶೇಕಡಾ 65% ಜನರು ವಲಸೆ ಪ್ರಮಾಣ ಕಡಿಮೆ ಯಾಗಿಲ್ಲಾ ಎಂದು ವಿವರಿಸಿದ್ದಾರೆ ಮತ್ತು ಶೇ 35% ಜನರು ಪ್ರಮಾಣ ಕಡಿಮೆಯಾಗಿದೆ ಎಂದು ವಿವರಿಸಿದ್ದಾರ.

18) ಈ ಯೋಜನೆಯ ಬಗ್ಗೆ ನಿಮಗೆ ಗೌರವ ಇರುವ ಬಗ್ಗೆ

**ಕೋಷ್ಟಕ-18**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 29 | 72.5% |
| 2. | ಇಲ್ಲ | 11 | 27.5% |
| | ಒಟ್ಟು | 40 | 100% |

ಈ ಯೋಜನೆಯ ಬಗ್ಗೆ ಶೇ 72.5 ಜನರಿಗೆ ಗೌರವ ಇದೆ ಎಂದು ವಿವರಿಸಿದ್ದಾರೆ.

19) ಈ ಯೋಜನೆಯಲ್ಲಿ ನಿಮಗೆ ಯಾವದಾದರು ಸಮಸ್ಯೆ ಉಂಟಾಗಿದೆಯೇ

**ಕೋಷ್ಟಕ-19**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 39 | 97.5% |
| 2. | ಇಲ್ಲಾ | 01 | 02.5% |
| | ಒಟ್ಟು | 40 | 100% |

ಈ ಸಮೀಕ್ಷೆಯಲ್ಲಿ 40 ಜನರ ಪ್ರತಿ ವಾದಿಗಳಲ್ಲಿ ಶೇ 97.5 ಜನರು ಯಾವುದೇ ಸಮಸ್ಯೆ ಉಂಟಾಗಿಲ್ಲಾ ಎಂದು ತಿಳಿಸಿದರು.

20) ಈ ಯೋಜನೆಯಿಂದ ನಿಮ್ಮ ಗ್ರಾಮದಲ್ಲಿ ನಿರೋದ್ಯೋಗ ಸಮಸ್ಯೆ ಕಡಿಮೆಯಾಗಿದೆ

**ಕೋಷ್ಟಕ-20**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 20 | 50% |
| 2. | ಇಲ್ಲಾ | 20 | 50% |
| | ಒಟ್ಟು | 40 | 100% |

ಈ ಮೇಲೆ ತಿಳಿಸಿರುವ ಕೊಷ್ಟಕದಲ್ಲಿ ಶೇ 50% ಅಂದರೆ ಅರ್ಧದಷ್ಟು ಆಗಿದೆ ಎಂದು ವ್ಯಕ್ತ ಪಡಿಸಿದರು.

21) ಈ ಯೋಜನೆಯಲ್ಲಿ ಭ್ರಷ್ಟಾಚಾರ ಕಂಡು ಬಂದಿದೆಯಾ

**ಕೋಷ್ಟಕ-21**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 08 | 20% |
| 2. | ಇಲ್ಲ | 32 | 80% |
| | ಒಟ್ಟು | 40 | 100% |

ಈ ಯೋಜನೆಯಲ್ಲಿ 80% ಜನರ ಅಭಿಪ್ರಾಯಲ್ಲಿ ಭ್ರಷ್ಟಾರವು ಕಂಡು ಬಂದಿಲ್ಲಾ ಎಂದು ತಿಳಿಸಿದರು.

22) ಈ ಯೋಜನೆಯಿಂದ ಆರ್ಥಿಕ ಅಭಿವೃದ್ಧಿ ಸಾಧ್ಯವೇ

**ಕೋಷ್ಟಕ-22**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 30 | 75% |
| 2. | ಇಲ್ಲ | 10 | 25% |
| | ಒಟ್ಟು | 40 | 100% |

ಇಲ್ಲಿ ಕೂಡಾ ಈ ಯೋಜನೆಯಿಂದ ಶೇ 75% ಪ್ರತಿಶತ ಆರ್ಥಿಕ ಅಭಿವೃದ್ಧಿ ಸಾಧ್ಯ ವಾಗುತ್ತಿದೆ ಎಂದು ಹೇಳಿದರು.

23) ಈ ಯೋಜನೆಯಿಂದ ಇನ್ನಿತರ ಪರಿಣಾಮಗಳ ಬಂದಿವೇ

**ಕೋಷ್ಟಕ-23**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 33 | 82.5% |
| 2. | ಇಲ್ಲ | 07 | 17.5% |
| | ಒಟ್ಟು | 40 | 100% |

ಶೇ 82.5% ರಷ್ಟು ಇನ್ನೂವರೆಗೆ ಯಾವದೆ ಪರಿಣಾಮಗಳ ಬಂದಿಲ್ಲಾ ಎಂದು ಸೂಕ್ತ ಮಾಹಿತಿ ನೀಡಿದರು. ಮತ್ತೆ ಕೆಲವರು ಅಂದರೇ ಶೇ 17.5% ಪರಿಣಾಮಗಳು ಬಂದಿವೆ ಎಂದು ತಿಳಿಸಿದರು.

24) ನಿಮ್ಮ ಗ್ರಾಮದಲ್ಲಿ ಈ ಯೋಜನೆಯಿಂದ ಅಭಿವೃದ್ಧಿಯಾಗಿದೆಯೇ

**ಕೋಷ್ಟಕ-24**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 35 | 87.5% |
| 2. | ಇಲ್ಲ | 05 | 12.5% |
| | ಒಟ್ಟು | 40 | 100% |

ಈ ಮೇಲಿನ ಕೊಷ್ಟಕ ಪ್ರಕಾರ ಶೇ 87.5 ಅಭಿವೃದ್ಧಿಯಾಗಿದೆ ಎಂದು ತಿಳಿಸಿದರು.

25) ಉದ್ಯೋಗ ಮಿತ್ರರಿಗೆ ತರಬೇತಿಯನ್ನು ನೀಡುತ್ತಾರೆಯೇ

**ಕೋಷ್ಟಕ-25**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 3 | 7.5% |
| 2. | ಇಲ್ಲ | 37 | 92.5% |
| | ಒಟ್ಟು | 40 | 100% |

ಈ ಯೋಜನೆಯಲ್ಲಿ ಉದ್ಯೋಗ ಮಿತ್ರರಿಗೆ ತರಬೇತಿಯ ಬಗ್ಗೆ ಶೇ. 92.5% ರಷ್ಟು ಜನರು ಮಾಹಿತಿ ಇಲ್ಲಾ, ಎಂದು ತಿಳಿಸಿದರು.

26) ಪುರುಷ ಮತ್ತು ಮಹಿಳೆಗೆ ಸಮಾನ ವೇತನ ವಿದೆಯೇ

**ಕೋಷ್ಟಕ-26**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 40 | 100% |
| 2. | ಇಲ್ಲ | 00 | 00% |
| | ಒಟ್ಟು | 40 | 100% |

ಈ ಮೇಲಿನ ಕೊಷ್ಟಕದಲ್ಲಿ ತಿಳಿಸಿರುವಂತೆ ಶೇ 100% ರಷ್ಟು ಜನರು ಇದ್ದರ ಒಪ್ಪಿಕೊಂಡಿದ್ದಾರೆ.

27) ಗ್ರಾಮೀಣ ಪ್ರದೇಶದಲ್ಲಿ ಈ ಯೋಜನೆಯ ಫಲಕಾರಿಯಾಗಿದೆ

**ಕೋಷ್ಟಕ-27**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 01 | 02.5% |
| 2. | ಇಲ್ಲ | 39 | 97.5% |
| | ಒಟ್ಟು | 40 | 100% |

ಕೇವಲ ಈ ಯೋಜನೆಯವು ಗ್ರಾಮೀಣ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರುವದರಿಂದ ಶೇ

97.5% ಈ ಯೋಜನೆ ಫಲಕಾರಿಯಾಗಿದೆ ಎಂದು ತಿಳಿಸಿದರು.

28) ಈ ಯೋಜನೆಯು ಬದಲಾವಣೆದ ಯಾಗಬೇಕು ?

**ಕೋಷ್ಟಕ-28**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 02 | 05% |
| 2. | ಇಲ್ಲ | 38 | 95% |
| | ಒಟ್ಟು | 40 | 100% |

ಶೇ 95% ಜನರ ಮಾಹಿತಿಯ ಪ್ರಕಾರ ಈ ಯೋಜನೆಯಲ್ಲಿ ಬಲದಾವಣೆಯ ಅವಶ್ಯಕ ಇಲ್ಲಾ ಎಂದು

ವ್ಯಕ್ತಪಡಿಸಿದರೂ.

29) ಈ ಯೋಜನೆಯಲ್ಲಿ ನಿಮ್ಮಗೆ ಆರೋಗ್ಯದ ಸೌಲಭ್ಯಗಳಿವೆ ಸಿಗುತ್ತವೆ

**ಕೋಷ್ಟಕ-29**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 09 | 22.5% |
| 2. | ಇಲ್ಲ | 31 | 77.5% |
| | ಒಟ್ಟು | 40 | 100% |

ಈ ಕೊಷ್ಟಕದ ಅನ್ವಯ ಶೇ 77.5% ಜನರಿಗೆ ಇದರ ಕುರಿತು ಮಾಹಿತಿನ್ನು ಇಲ್ಲಾ ಮತ್ತು ಆರೋಗ್ಯ ಸೌಲಭ್ಯಗಳು ಕೂಡಾ ಇಲ್ಲಾ ಎಂದು ವ್ಯಕ್ತಪಡಿಸಿದರು.

30)ಕುಂದು-ಕೊರತೆಗಳು ಮತ್ತು ದೂರುಗಳನ್ನು ನೀಡಲು ದೂರು ಪೆಟ್ಟಿಗೆಯ ಸೌಲಭ್ಯ ವಿದಯೇ

**ಕೋಷ್ಟಕ-30**

| ಕ್ರ. ಸಂಖ್ಯೆ | ಪ್ರತಿಕ್ರಿಯೇ | ಪ್ರತಿ ವಾದಿಗಳ ಸಂಖ್ಯೆ | ಶೇ. ವಾರು |
|---|---|---|---|
| 1. | ಹೌದು | 01 | 02.5% |
| 2. | ಇಲ್ಲ | 39 | 97.5% |
| | ಒಟ್ಟು | 40 | 100% |

ಯಾವುದೇ ಸಮಸ್ಯೆಗಳು ಬಂದಾಗ ಅದನ್ನು ತಿಳಿಸಿಲು ದೂರು ಪೆಟ್ಟಿಗೆಯ ವ್ಯವಸ್ಥೆಯನ್ನು ಶೇ. 95.5 ಜನರು ಇಲ್ಲಾ ಎಂದು ತಿಳಿಸಿದರು.

## ಅಧ್ಯಾಯ - 6

**ಫಲಿತಾಂಶ:**

1. ಮಾಹಿತಿದಾರರ ವಯಸ್ಸು ಈ ಕೊಷ್ಟಕದ ಪ್ರಕಾರ ಶೇ. 60% ರಷ್ಟು ಜನರು 18 ರಿಂದ 25 ವಯಸ್ಸಿನವರಿದ್ದಾರೆ ಎಂದು ತಿಳಿದು ಬಂದಿದ.

2. ಮಾಹಿತಿದಾರರ ಶಿಕ್ಷಣ ಶೇ. 40 ರಷ್ಟು ಜನರು 1 ರಿಂದ 7ನೇ ತರಗತಿ ಶಿಕ್ಷಣವನ್ನು ಹೊಂದಿದ್ದಾರೆ.

3. ಮಾಹಿತಿದಾರರ ವಾರ್ಷಿಕ ಆದಾಯವು ಈ ಗ್ರಾಮದಲ್ಲಿ ಶೇ. 50%ರಷ್ಟು ಜನರ ಆದಾಯವು 10,000 ಇದೇ ಎಂದು ಈ ಸಮಿಕ್ಷೇಯಪ್ರಕಾರ ತಿಳಿದುಬಂದಿದೆ.

4. ಈ ಮೇಲೆ ತಿಳಿಸಿರುವ ಪ್ರಕಾರ ಶೇ. 62.5% ಜನರು ಕೃಷಿಯನ್ನು ಮಾಡುತ್ತಾರೆ. ಎಂದು ತಿಳಿದು ಬಂದಿದೆ.

5. ಈ ಗ್ರಾಮದ ಶೇ. 95 ಜನರು ಈ ಯೋಜನೆಯ ಬಗ್ಗೆ ಮಾಹಿತಿ ಇದೆ ಎಂದು ತಿಳಿಸಿದ್ದಾರೆ.

6. ಕುಸುನೂರು ಗ್ರಾಮದಲ್ಲಿ ಶೇ. 62.5% ಜನರು ಪಂಚಾಯಿತಿಯಲ್ಲಿ ಸಭೆ ನಡೆಯುತ್ತದೆ ಎಂದು ವಿವರಿಸಿದ್ದಾರೆ.

7. ಈ ಕೋಷ್ಟಕದ ಪ್ರಕಾರ ಪ್ರತಿ ಕ್ರೀಯೆ ಶೇ. 50% ಹೌದು ಮತ್ತು 50% ಇಲ್ಲ ಎಂದು ತಿಳಸಿದ್ದಾರೆ.

8. ಈ ಯೋಜನೇಯು ಕುಸುನೂರ ಗ್ರಾಮದಲ್ಲಿ 100% ಪ್ರತಿ ಶತ ಅವಶ್ಯಕ ಎಂದಿದ್ದಾರೆ.

9. ಮೇಲಿನ ಕೊಷ್ಟಕದ ಅನ್ವಯ ಶೇ. 90ರಷ್ಟು ಜನರು ಬ್ಯಾಂಕ ಖಾತೆಯನ್ನು ಹೊಂದಿದ್ದಾರೆ.

10. ಈ ಒಂದು ಸಮಿಕ್ಷೆಯ ಪ್ರಕಾರ ಶೇ 75% ಜನರು ಉದ್ಯೋಗ ಚೀಟಿಯನ್ನು ಹೊಂದಿದ್ದಾರೆ.

11. ನಿರುದ್ಯೋಗ ಭತ್ಯೆಯನ್ನು ಕುರಿತು ಶೇ. 92.5% ರಷ್ಟು ಜನರು ಮಾಹಿತಿ ಇಲ್ಲ ಎಂದು ತಿಳಿದುಬಂದಿದೆ.

12. ಈ ಸಮಿಕ್ಷೆಯ ಪ್ರಕಾರ ಶೇ 52% ಪ್ರತಿ ಶತ ಸರಿಯಾಗಿ ಸಹಕರಿಸಿದ್ದಾರೆ ಎಂದು ತಿಳಿಸಿದ್ದಾರೆ.

13. ಶೇ 57.5% ರಷ್ಟು ಜನರು ಈ ಯೋಜನೆಯಲ್ಲಿ ಕೂಲಿದರದ ಬಗ್ಗೆ ಮಾಹಿತಿ ಇದೇ ಎಂದು ತಿಳಿಸಿದ್ದಾರೆ.

14. ಕುಸುನೂರು ಗ್ರಾಮದಲ್ಲಿ ಶೇ 75%ರಷ್ಟು ಜನರು ಅಂಗವಿಲರಿಗೆ ಉದ್ಯೋಗ ವಿದೇ ಎಂದು ತಿಳಿಸಿದ್ವರು.

15. ಈ ಮೇಲಿನ ಕೋಷ್ಟದ ಪ್ರಕಾರ ಶೇ 65% ರಷ್ಟು ಜನರು ವಲಸೆ ಪ್ರಮಾಣಯಾಗಿಲ್ಲ ಎಂದು ತಿಳಿದ್ದಾರೆ.

16. ಈ ಯೋಜನೆಯ ಬಗ್ಗೆ ಶೇ. 72.5%ರಷ್ಟ ಜನರಿಗೆ ಗೌರವ ಇದೇ ಎಂದು ತಿಳಿಸಿದ್ದಾರೆ.

17. ಈ ಸಮೀಕ್ಷೆಯಲ್ಲಿ 40 ಜನರ ಪ್ರತಿವಾದಿಗಳಲ್ಲಿ ಶೇ 97.5%ರಷ್ಟು ಜನರು ಯಾವುದೇ ಸಮಸ್ಯೆ ಉಂಟಾಗಿಲ್ಲ ಎಂದು ತಿಳಿಸಿದ್ವರು.

18. ಈ ಮೇಲೆ ತಿಳಿಸಿರುವ ಕೊಷ್ಟದಲ್ಲಿ ಶೇ. 50%ರಷ್ಟು ಅಂದರೆ ಅರ್ಧದಷ್ಟು ನಿರುದ್ಯೋಗ ಸಮಸ್ಯೆ ಕಡಿಮೆ ಯಾಗಿದೆ ಎಂದು ತಿಳಿಸಿದ್ದಾರೆ.

19. ಈ ಯೋಜನೆಯಲ್ಲಿ ಶೇ 80% ಜನರ ಅಭಿಪ್ರಾಯ ಭ್ರಷ್ಟಾಚಾರ ಕಂಡು ಬಂದಿಲ್ಲ.

20. ಈ ಮೇಲಿನ ಕೊಷ್ಟಕದ ಪ್ರಕಾರ ಶೇ 87.5ರಷ್ಟು ಅಭಿವೃದ್ಧಿಯಾಗಿದೆ ಎಂದು ತಿಳಿಸಿದರು.

## ಸಲಹೆಗಳು:

ಈ ಅಧ್ಯಾಯನವನ್ನು ಕೈಗೊಂಡ ಮೇಲ ಅಧ್ಯಾಯನದಿಂದ ತಿಳಿದುಬಂದು ಅಂಶಗಳನ್ನು ಮನವರಿಕೆ ಮಾಡಿಕೊಂಡು ಸಂಶೋಧಕನು ಈ ಕೆಳಗಿನ ಸಲಹೆಗಳನ್ನು ನೀಡಲು ಪ್ರಯತ್ನಿಸಿದ್ದಾರೆ.

- ✓ ಈ ಯೋಜನೆಯುವ ಮಾಡುವದು. ಸಂಪೂರ್ಣವಾಗಿ ಉಪಯೋಗವಾಗುವಂತೆ ಕಾರ್ಯ
- ✓ ಇದರ ಬಗ್ಗೆ ಇನ್ನೂ ಅರಿವು ಕಾರ್ಯಕ್ರಮಗಳನ್ನು ಮಾಡಬೇಕು.
- ✓ ಈ ಯೋಜನೆಯ ಬಗ್ಗೆ ತರಬೇತಿಯನ್ನು ನೀಡುವುದು.
- ✓ ಅವರಿಗೆ ಇದರ ಸೌಲಭ್ಯಗಳ ಕುರಿತು ಮಾಹಿತಿ ನೀಡುವುದು ಮತ್ತು ಸೌಲಭ್ಯಗಳನ್ನು ಒದಗಿಸಬೇಕು.
- ✓ ನಿರೂದ್ಯೋಗ ಭತ್ಯೆಯನ್ನು ನೀಡಬೇಕು.
- ✓ ಇವರ ಸಮಸ್ಯೆಗಳನ್ನು ಬಗೆಹರಿಸುವ ಮೂಲಕ ಅಭಿವೃದ್ಧಿಯನ್ನು ಮಾಡುವುದು.
- ✓ ಅಂಗವಿಲರಿಗೆ ಹೆಚ್ಚಿನ ರೀತಿಯ ಅವಕಾಶಗಳನ್ನು ನೀಡುವುದು.

ಒಟ್ಟಾರೆಯಾಗಿ ಈ ಯೋಜನೆಯನ್ನು ಅಭಿವೃದ್ಧಿ ಪಡಿಸಿ. ಗ್ರಾಮೀಣ ಪ್ರದೇಶದ ಜನರ ಅಭಿವೃದ್ಧಿಯಾಗುವಲ್ಲಿ ಈ ಒಂದು ಯೋಜನೆಯು ಮಹತ್ವದ ಪಾತ್ರ ನಿರ್ವಹಿಸುತ್ತಿದೆ. ಎಂದು ಹೇಳಬಹುದು.

## ಮೌಲ್ಯಮಾಪನ:

ಯಾವುದೇ ಸಂಶೋಧ ಅಧ್ಯಾಯನವು ಅಥವಾ ಯಾವುದೇ ಕಾರ್ಯವು ಮುಗಿದ ಮೇಲ ಮತ್ತೊಮ್ಮ ವಿಮರ್ಶಿಸುವುದು ಅತೀ ಮುಖ್ಯವಾಗಿದೆ. ಯೋಜನಾ ವರದಿಯ ಅಧ್ಯಾಯನ ಪ್ರಾರಂಭದಿಂದ ಅಂತ್ಯದವರೆಗ ಸಂಪೂರ್ಣವಾಗಿ ವಿಮರ್ಶಿಸುವುದು. ಅವಲೋಕಿಸುವುದು, ಮೌಲ್ಯಮಾಪನ ಮಾಡುವುದು ಮುಖ್ಯ ಉದ್ದೇಶಿವಾಗಿದೆ ಹಾಗೂ ಈ ಅಧ್ಯಾಯನದ ಸಂಪೂರ್ಣ ವಿಮರ್ಶೆಗೆ ಅವಲೋಕ್ಕೆ ಮೌಲ್ಯಮಾಪನ ಮಾಡಿ ವರದಿಯನ್ನು ರಚಿಸಲಾಗಿದೆ.

### ಮೌಲ್ಯಮಾಪನ ಮಹತ್ವ:

- ✓ ಮೌಲ್ಯ ಮಾಪನವು ಯೋಜನಾ ವರದಿಯು ಸರಿ ತಪ್ಪುಗಳನ್ನು ಕಂಡು ಹಿಡಿಯುವಲ್ಲಿ ಸಹಾಯಕವಾಗಿದೆ.
- ✓ ಮೌಲ್ಯಮಾಪನವು ಯೋಜನಾ ವರದಿಯ ಒಳಗೊಂಡಿರಬೇಕಾದ ತಿಳಿಯುವಲ್ಲಿ ಸಹಾಯಕವಾಗಿದೆ. ಅಂಶಗಳನ್ನು
- ✓ ಮೌಲ್ಯಮಾಪನವು ಈ ಯೋಜನಾ ವರದಿಯನ್ನು ಅಚ್ಚು ಕಟ್ಟಾಗಿ ಮಾಹಿತಿಯನ್ನು ಸಂಗ್ರಹಿಸುವಲ್ಲಿ ಸಹಾಯಜವಾಗಿದೆ.

# ಉಪಸಂಹಾರ

ಯಾವುದೇ ಒಂದು ಅಧ್ಯಾಯನ ಪ್ರಾರಂಭವಾಗಬೇಕಾದರೆ ಪ್ರಸ್ತಾವನೆ ಅಥವಾ ಪೀಠಿಕೆ ಎಷ್ಟು ಮುಖ್ಯವು ಅಷ್ಟೇ ಅಗತ್ಯವಾಗಿದೆ. ಸಂಶೋಧಕನು ತನ್ನ ಅಧ್ಯಾಯನವನ್ನು "ಕುಸುನೂರ ಗ್ರಾಮದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮೌಲ್ಯಮಾಪನ ಎಂಬ ವಿಷಯದ ಮೇಲೆ ಸಂಶೋಧನಾ ಅಧ್ಯಾಯನವನ್ನು ಕೈಗೊಳ್ಳಲಾಯಿತ್ತು. ಗ್ರಾಮೀಣ ಜನರು ಹೆಚ್ಚಿನ ರೀತಿಯಾಗಿ ವಲಸೆ ಹೋಗುವದು ಮತ್ತು ಹಲವಾರು ಸಮಸ್ಯೆಯನ್ನು ಎದುರಿಸುವದು. ಈ ಒಂದು ಸಮಸ್ಯೆಯನ್ನು ಬಗೆಹರಿಸಲ್ಲಿಕೆ. ಈ ಯೋಜನೆಯು ಮುಖ್ಯವಾದ ಪಾತ್ರವನ್ನುವಹಿಸುತ್ತಿದೆ ಎಂದು ಹೇಳಬಹುದು ಒಂದು ಆರ್ಥಿಕ ವರ್ಷದಲ್ಲಿ ಒಂದು ಕುಟುಂಬಕ್ಕೆ 100 ದಿನಗಳಿಗೆ ಕಡಿಮೆ ಇಲ್ಲದೆ ಅಕುಶಲ ಕೆಲಸವನ್ನು ನೀಡಿ ಅವರ ಸಮಸ್ಯೆಗಳನ್ನು ಪರಿಹರಿಸುವ ಪ್ರಯತ್ನ ಮಾಡುವುದು.

ಈ ಯೋಜನೆಯ ಪ್ರಕಾರ 40 ನಮೂನೆಯಲ್ಲಿ ತೆಗೆದುಕೊಂಡು ಇದರ ಬಗ್ಗೆ ಸಮಿಕ್ಷೆಯನ್ನು ಮಾಡಲಾಯಿತ್ತು ಇದರಲ್ಲಿ ಹಲವಾರು ರೀತಿಯ ಫಲಿತಾಂಶಗಳು ಕಂಡು ಬಂದವು ಎಂದು ಹೇಳಬಹುದು.

ಈ ರೀತಿಯಾಗಿ ನಾನು ಮಾಹಿತಿಯನ್ನು ಸಂಗ್ರಹಿಸುವಾಗ ಜನರ ಸಹಕಾರ ದೊರೆಯಿತ್ತು ಅದರ ಜೊತೆಗೆ ಮಾಹಿತಿಯ ಸಂಗ್ರಹಣೆ ಪರಿಪೂರ್ಣವಾಗಿಸಲು ಸಾಧ್ಯವಾಯಿತ್ತು.

ಯೋಜನಾ ವರದಿ

# ಅನುಬಂಧ

## ಆಧಾರ ಗ್ರಂಥಗಳು

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಕೈಪಿಡಿ

- ಕೇಂದ್ರ ಸರಕಾರ

ಗ್ರಾಮ ಪಂಚಾಯ ಕೈಪಿಡಿ

- ರಾಜ್ಯ ಸರಕಾರ

ಯೋಜನಾ ವರದಿ

**SB arts and k.c.p science College vijayapura**

-: ಸಂಶೋಧನಾ ವಿಷಯ :-

**ವಿಷಯ :-** ಕುಸುನೂರ ಗ್ರಾಮದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯಿದೆಯ ಮೌಲ್ಯಮಾಪನದ ಕುರಿತು ಒಂದು ಅಧ್ಯಾಯನ."

**ಮಾರ್ಗದರ್ಶಕರು:-**
ಶ್ರೀಮತಿ ಭಾರತೀ ಕಾರ್ಕಳ
ಉಪನ್ಯಾಕರು KCP.SI.CO.VIJAYAPUR

**ಸಂದರ್ಶಕರು**
ಅಭಿಷೇಕ ಚವಡಿಹಾಳ
ಸಮಾಜ ಕಾರ್ಯ ವಿಭಾಗದ 6ನೇ SEM
KCP.SI.CO.VIJAYAPUR

---

1. ಗ್ರಾಮದ ಹೆಸರು : ________________

2. ಮಾಹಿತಿದಾರರ ಹೆಸರು : ________________

3. ಧರ್ಮ : a) ಹಿಂದೂ b) ಮುಸ್ಲಿಂ c) ಕ್ರಿಚ್ಯೆನ d) ಇತರೆ

4. ವಯಸ್ಸು : a) 18-25 b) 26-35 c) 36-50 d) 51-above

5. ಶಿಕ್ಷಣ : a) 7th b) S.S.L.C. c) P.U.C d) ಇಲ್ಲಾ

6. ವಾರ್ಷಿಕ ಆದಾಯ : a) 1,000-10,000 b) 11,000-20,000 c) 20,000-above

7. ಉದ್ಯೋಗ : a) ಸರಕಾರಿ ನೌಕರಿ b) ಅರೆಸರಕಾರಿ

c) ಕೂಲಿ d) ಕೃಷಿ

8. ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಮಾಹಿತಿ ಇದೇಯೇ?

ಹೌದು ಇಲ್ಲಾ

9. ನಿಮ್ಮಗ್ರಾಮ ಪಂಚಾಯತಿಯಲ್ಲಿ ಈ ಯೋಜನೆಯ ಬಗ್ಗೆ ಸಭೆಯನ್ನು ಮಾಡುತ್ತಿರಾ?

ಹೌದು ಇಲ್ಲಾ

10. ಈ ಯೋಜನೆಯು ನಿಮ್ಮ ಗ್ರಾಮಕ್ಕೆ ಅವಶ್ಯಕವ

ಹೌದು

11. ಈ ಯೋಜನೆಯಲ್ಲಿ ನೀವು ಬ್ಯಾಂಕ್ ಖಾತೆಯನ್ನು ತೆಗೆದುಕೊಂಡಿದ್ದಿರಾ

ಹೌದು ಇಲ್ಲಾ

12. ಈ ಯೋಜನೆಯಿಂದ ನಿಮ್ಮಗೆ ಉದ್ಯೋಗ ಚೀಟಿಯನ್ನು ನೀಡಿದ್ದಾರೆಯೇ

ಹೌದು ಇಲ್ಲಾ

13. ನಿಮ್ಮಗೆ ನಿರೋದ್ಯೋಗ ಭತ್ಯ ಕುರಿತು ಮಾಹಿತಿ ಇದೆಯಾ

ಹೌದು ಇಲ್ಲಾ

14. ಈ ಯೋಜನೆಯಲ್ಲಿ ಅಧಿಕಾರಿಗಳು ಸರಿಯಾಗಿ ಸಹಕರಿಸಿದ್ದಾರೆಯೇ?

ಹೌದು ಇಲ್ಲಾ

15. ಈ ಯೋಜನೆಯಲ್ಲಿ ನಿಮಗೆ ಕೂಲಿದರ ಬಗ್ಗೆ ಮಾಃಇತಿ ಇದೆಯೇ

ಹೌದು ಇಲ್ಲಾ

16. ಹಾಗಾದರೆ ಈ ಯೋಜನೆಯಲ್ಲಿ ಕೂಲಿದರ ಎಷ್ಟು ಇದೇ

ಹೌದು ಇಲ್ಲಾ

17. ಅಂಗವಿಕಲ ಅಥವಾ ವಿಕಲಚೇತನರಿಗೆ ಇದರಲ್ಲಿ ಉದ್ಯೋಗ ವಿದೇಯೇ

ಹೌದು ಇಲ್ಲಾ

18. ಈ ಯೋಜನೆಯಿಂದ ನಿಮ್ಮ ಗ್ರಾಮದಲ್ಲಿ ವಲಸೆ ಪ್ರಮಾಣ ಕಡಿಮೆ ಯಾಗಿದೆ

ಹೌದು ಇಲ್ಲಾ

19. ಈ ಯೋಜನೆಯ ಬಗ್ಗೆ ನಿಮಗೆ ಗೌರವ ಇರುವ ಬಗ್ಗೆ

ಹೌದು ಇಲ್ಲಾ

20. ಈ ಯೋಜನೆಯಲ್ಲಿ ನಿಮಗೆ ಯಾವದಾದರು ಸಮಸ್ಯೆ ಉಂಟಾಗಿದೆಯೇ

ಹೌದು ಇಲ್ಲಾ

21. ಈ ಯೋಜನೆಯಿಂದ ನಿಮ್ಮ ಗ್ರಾಮದಲ್ಲಿ ನಿರೋದ್ಯೋಗ ಸಮಸ್ಯೆ ಕಡಿಮೆಯಾಗಿದೆ

ಹೌದು ಇಲ್ಲಾ

22. ಈ ಯೋಜನೆಯಲ್ಲಿ ಭ್ರಷ್ಟಾಚಾರ ಕಂಡು ಬಂದಿದೆಯಾ

ಹೌದು ಇಲ್ಲಾ

23. ಈ ಯೋಜನೆಯಿಂದ ಆರ್ಥಿಕ ಅಭಿವೃದ್ಧಿ ಸಾಧ್ಯವೇ

ಹೌದು ಇಲ್ಲಾ

24. ಈ ಯೋಜನೆಯಿಂದ ಇನ್ನಿತರ ಪರಿಣಾಮಗಳ ಬಂದಿವೇ

ಹೌದು ಇಲ್ಲಾ

25. ನಿಮ್ಮ ಗ್ರಾಮದಲ್ಲಿ ಈ ಯೋಜನೆಯಿಂದ ಅಭಿವೃದ್ಧಿಯಾಗಿದೆಯೇ

ಹೌದು ಇಲ್ಲಾ

26. ಉದ್ಯೋಗ ಮಿತ್ರರಿಗೆ ತರಬೇತಿಯನ್ನು ನೀಡುತ್ತಾರೆಯೇ

ಹೌದು ಇಲ್ಲಾ

27. ಪುರುಷ ಮತ್ತು ಮಹಿಳೆಗೆ ಸಮಾನ ವೇತನ ವಿದೆಯೇ

ಹೌದು ಇಲ್ಲಾ

28. ಗ್ರಾಮೀಣ ಪ್ರದೇಶದಲ್ಲಿ ಈ ಯೋಜನೆಯ ಫಲಕಾರಿಯಾಗಿದೆ

ಹೌದು ಇಲ್ಲಾ

29. ಈ ಯೋಜನೆಯು ಬದಲಾವಣೆದ ಯಾಗಬೇಕು

ಹೌದು ಇಲ್ಲಾ

30. ಈ ಯೋಜನೆಯಲ್ಲಿ ನಿಮ್ಮಗೆ ಆರೋಗ್ಯದ ಸೌಲಭ್ಯಗಳಿವೆ ಸಿಗುತ್ತವ

ಹೌದು ಇಲ್ಲಾ


31. ಕುಂದು-ಕೊರತೆಗಳು ಮತ್ತು ದೂರುಗಳನ್ನು ನೀಡಲು ದೂರು ಪೆಟ್ಟಿಗೆಯ ಸೌಲಭ್ಯ ವಿದೆಯೇ

ಹೌದು ಇಲ್ಲಾ

* ಕೆಲಸ ಕೋರುವವರ ಪೈಕಿ ಕನಿಷ್ಠ ಮೂರನೇ ಒಂದು ಭಾಗ ಮಹಿಳೆಯರಿಗೆ ಆದ್ಯತೆ ಮೇರೆಗೆ ಉದ್ಯೋಗ ಒದಗಿಸಬೇಕು.



* 15 ದಿನಗಳೊಳಗಾಗಿ ಕೂಲಿಯನ್ನು ಪಾವತಿಸದಿದ್ದಲ್ಲಿ, ಅವರು ಕೂಲಿ ಪಾವತಿ ಅಧಿನಿಯಮ 1936ರ ಅನ್ವಯ ಕೂಲಿ ವಿಳಂಬ ಪರಿಹಾರ ಪಡೆಯುವ ಹಕ್ಕುಳ್ಳವರಾಗಿರುತ್ತಾರೆ.





* ಸಮಾನ ವೇತನ ಅಧಿನಿಯಮ 1976ರ ಅನ್ವಯ ಪುರುಷರು ಮತ್ತು ಮಹಿಳೆಯರು ಸಮಾನ ವೇತನ ಪಡೆಯುವ ಹಕ್ಕುಳ್ಳವ- ರಾಗಿರುತ್ತಾರೆ.

ಯೋಜನಾ ವರದಿ

## ದೂರುಗಳನ್ನು ಸಲ್ಲಿಸುವ ವಿಧಾನ (ನಿಯಮ-4)

- ಯಾವುದೇ ವ್ಯಕ್ತಿಯು ನಿರ್ದಿಷ್ಟಪಡಿಸಲಾದ ವಿವಿಧ ಮಟ್ಟಗಳಲ್ಲಿನ ಕುಂದು- ಕೊರತೆ ನಿವಾರಣಾ ಅಧಿಕಾರಿಗೆ ತನ್ನ ಕುಂದು-ಕೊರತೆ ಅರ್ಜಿಯನ್ನು ಸಲ್ಲಿಸಬಹುದು.

- ದೂರುಗಳನ್ನು ಬರವಣಿಗೆ, ಬಾಯಿ ಮಾತು, ಅಂಚೆ ಮೂಲಕ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ವೆಬ್‌ಸೈಟ್ ಮೂಲಕ ಅಥವಾ ಸ್ಥಾಪಿಸಲಾದ ಸಹಾಯವಾಣಿ (ಉಚಿತ ಕರೆ ಸಂಖ್ಯೆ: 18004258666) ಮೂಲಕ ಸಲ್ಲಿಸಬಹುದಾಗಿದೆ.




- ಬಾಯಿ ಮಾತಿನ ಮೂಲಕ ದೂರನ್ನು ನೀಡಿದರೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿ / ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅಥವಾ